ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮಾರ್ಚ್-2018
ಬೆಲೆ ರೂ. 1



ಮಮತೆ, ಕರುಣೆ, ವಾತ್ಸಲ್ಯ, ಅಕ್ಕರೆ
ಮತ್ತು ತಾಳ್ಮೆಯ

## ಪ್ರಬಲ ಶಕ್ತಿ ಮಹಿಳೆ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 8447288475
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ತ್ಯಾಗೇಶ್ ಮೂರ್ತಿ 9868393961
ಸಂತೋಷ್ ಜೆ. 9911235783

**ವಿಶೇಷ ಆಹ್ವಾನಿತರು**
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

**ಅಭಿಮತ**
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 28 ಸಂಚಿಕೆ 6
ಮಾರ್ಚ್ 2018, ಬೆಲೆ ರೂ. 1

## ನೇರ ಮಾತು

ಕರ್ನಾಟಕ ರಾಜ್ಯದ ಚುನಾವಣೆ ಸನ್ನಿಹಿತವಾಗಿದೆ. ದೆಹಲಿಯ ಕೇಂದ್ರ ನಾಯಕರ ಕಚೇರಿ ಮತ್ತು ನಿವಾಸಗಳಿಗೆ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಭಾ.ಜ.ಪ.ದ ಆಕಾಂಕ್ಷಿ ಅಭ್ಯರ್ಥಿಗಳ ನಿರಂತರ ಅಲೆದಾಟ ಆರಂಭವಾಗಿದೆ. ಇನ್ನೊಂದೆಡೆ ಕೇಂದ್ರದ ಎರಡೂ ಪಕ್ಷಗಳ ನಾಯಕರುಗಳು ಚುನಾವಣೆ ಗೆಲ್ಲಲೇಬೇಕು ಎಂದು ಕರ್ನಾಟಕ ರಾಜ್ಯದಲ್ಲಿ ಅಲೆದಾಡಲು ಆರಂಭಿಸಿದ್ದಾರೆ. ಜೆ.ಡಿ.ಎಸ್. ಪಕ್ಷದ ನಿರ್ಧಾರಗಳೇನಿದ್ದರೂ ಬೆಂಗಳೂರಿನಲ್ಲೇ ತೀರ್ಮಾನ. ಈ ಸಂದರ್ಭದಲ್ಲಿ ಅತ್ಯಂತ ಸಂತೋಷದ ಸುದ್ದಿ ಎಂದರೆ, ಕನ್ನಡಿಗರು ಕನ್ನಡವನ್ನು ಮರೆಯುತ್ತಿದ್ದಾರೆ ಎನ್ನುವ ಸ್ಥಿತಿಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ರಾಹುಲ್ ಗಾಂಧಿ ಅಲ್ಲಲ್ಲಿ ಕನ್ನಡದಲ್ಲಿ ಉಚ್ಚರಿಸಲು ಪ್ರಯತ್ನಿಸುತ್ತಿರುವುದು, ಅವರ ಉಚ್ಚಾರ ಕರ್ನಾಟಕದಲ್ಲಿದ್ದು ಆಂಗ್ಲ ಮಾಧ್ಯಮದಲ್ಲಿ ಓದುವ, ಮನೆಯಲ್ಲಿ ನಿರಂತರ ಕನ್ನಡ ಮಾತನಾಡುವ ಕನ್ನಡಿಗರ ಕನ್ನಡ ಉಚ್ಚಾರಕ್ಕಿಂತ ಉತ್ತಮವೇ ಸರಿ ಎನ್ನಬಹುದು. ಏನೇ ಇರಲಿ, ಅವರ ಪ್ರಯತ್ನಕ್ಕೆ ಪ್ರಶಂಸೆ ಸಲ್ಲಲೇಬೇಕು. ಅವರ ರಾಜಕೀಯ ಭಾಷಣದಲ್ಲಿ ಬಸವಣ್ಣ, ಕುವೆಂಪು, ಕೆಂಪೇಗೌಡ, ಗೌರಿ ಲಂಕೇಶ್ ಮುಂತಾದವರೂ ಬರುತ್ತಾರೆ. ಆದರೆ ಕನ್ನಡದ ರಾಜಕಾರಣಿಗಳ ಬಾಯಿಯಲ್ಲಿ ಇವರಾರೂ ಕಾಣಸಿಗುವುದಿಲ್ಲ! ಇದು ವಿಪರ್ಯಾಸವೇ ಸರಿ.

ಕನ್ನಡದ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿಯ ಆಧಾರದಲ್ಲಿ ಕರ್ನಾಟಕದಲ್ಲಿ ಯಾವ ಪಕ್ಷವೂ ಚುನಾವಣೆಗೆ ಇಳಿಯುವುದಿಲ್ಲ. ಯಾಕೆಂದರೆ ತಮಿಳುನಾಡು ಮತ್ತು ಆಂಧ್ರದ ಹಾಗೆ ನಮಲ್ಲಿ ಭಾಷೆಯ ಆಧಾರದ ಪ್ರಾದೇಶಿಕ (ರಿಜನಲ್) ಪಕ್ಷಗಳಿಲ್ಲ. ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠ ಹಾಗೂ ಇನ್ನಿತರ ವಿಶ್ವವಿದ್ಯಾಲಯಗಳಲ್ಲಿ ಎಂಫಿಲ್. ಪಿ.ಎಚ್.ಡಿ. ಮಾಡಲು ಅವಕಾಶವಿಲ್ಲದಾಗಿದೆ, ಹೀಗಿರುವಾಗ ಅದನ್ನು ಆಗು ಮಾಡಬೇಕೆಂಬ ಆಶಯದ ಕೂಗನ್ನು ಕೇಂದ್ರದ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ನಾಯಕರು ಎತ್ತುತ್ತಿಲ್ಲ, ಕನ್ನಡಕ್ಕೆ ಅನ್ಯಾಯವಾಗುತ್ತಿದೆ ಅದನ್ನು ಸರಿಪಡಿಸಿ ಎನ್ನುವ ಕೂಗನ್ನು ಒಂದಿಬ್ಬರು ಕನ್ನಡದ ರಾಷ್ಟ್ರ ರಾಜಕಾರಣಿಗಳು ಮಾಡುತ್ತರಾದರೂ ಇತರರಿಂದ ಅದು ಬರುತ್ತಲೇ ಇಲ್ಲ.

ಒಟ್ಟಾರೆ ರಾಜಕೀಯ ಪಕ್ಷಗಳ (ಆಡಳಿತ, ವಿಪಕ್ಷ) ಸ್ವಯಂ ಲಾಭಕ್ಕಾಗಿ ಅಧಿಕಾರದ ಲಾಲಸೆಯಿಂದ ಕೇವಲ ಚುನಾವಣೆ ಸಮಯಕ್ಕೆ ಮಾತ್ರ ನೆಲ, ಜಲ, ಸಂಸ್ಕೃತಿ, ಭಾಷೆಗಳ ಬಗ್ಗೆ ಪುಂಖಾನುಪುಂಖವಾಗಿ ಮಾತುಗಳ ಪ್ರವಾಹ ಹರಿಸಿ ಸ್ಥಳೀಯ ಜನರ ಭಾವನೆಗಳೊಂದಿಗೆ ಆಟವಾಡಿ ತದನಂತರ ಆ ವಿಷಯಗಳ ಬಗ್ಗೆ ಚಕಾರ ಎತ್ತುವುದಿಲ್ಲ. ಅಂದರೆ, ಈ ರಾಷ್ಟ್ರೀಯ ಪಕ್ಷಗಳಿಗೆ 'ರಾಜಕಾರಣ' ಮುಖ್ಯವೇ ಹೊರತು ಭಾಷಾಭಿಮಾನ, ಪ್ರದೇಶಾಭಿಮಾನ ಮುಖ್ಯವಾಗುತ್ತಿಲ್ಲ. ಕರ್ನಾಟಕದ ಜನತೆ ರಾಜ್ಯದ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಕಾಳಜಿ ಇರುವ ಅಭ್ಯರ್ಥಿಗಳನ್ನು ಈ ಬಾರಿ ಚುನಾಯಿಸಬಹುದೆಂಬ ನಿರೀಕ್ಷೆಯಲ್ಲಿ...... ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***



ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 9560653021/ 9560563203, 011–26109615 / 26104818

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ಮಾರ್ಚ್, 2018ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ಮಾರ್ಚ್, 2018ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 25 ಮಾರ್ಚ್, 2018ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 25 ಮಾರ್ಚ್, 2018ರಂದು ಸಾಯಂಕಾಲ 4 ಗಂಟೆಯಿಂದ.

## ಮುನ್ನೋಟ

ಆತ್ಮೀಯ ಕನ್ನಡಿಗರಿಗೆ ಯುಗಾದಿ ಹಬ್ಬದ ಶುಭಾಶಯಗಳು. ವರ್ಷದ ಸಂಘದ ಕಾರ್ಯಕ್ರಮಗಳು ಮುಗಿಯುತ್ತಾ ಬರುತ್ತಿವೆ. ಸಾಂಸ್ಕೃತಿಕ ಕಾರ್ಯಕ್ರಮ, ಸಾಹಿತ್ಯ ಕಾರ್ಯಕ್ರಮಗಳ ಜೊತೆಗೆ ಆಟೋಟ ಸ್ಪರ್ಧೆಗಳ ಬಹುಮಾನ ವಿತರಣೆ ಮತ್ತು ಸಂಘದ ವಾರ್ಷಿಕೋತ್ಸವವನ್ನು ಮಕ್ಕಳ ಪರೀಕ್ಷೆಯನ್ನು ಗಮನದಲ್ಲಿಟ್ಟುಕೊಂಡು ಏಪ್ರಿಲ್ 8ರಂದು ಆಯೋಜಿಸಲಾಗಿದೆ. ಈ ಸಂದರ್ಭದಲ್ಲಿ ಸ್ಥಳೀಯರಿಗೆ ಪ್ರಾಮುಖ್ಯತೆ ನೀಡುವ ಉದ್ದೇಶದಿಂದ ಸಮೂಹ ನೃತ್ಯ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಭಾಗವಹಿಸಲಿಚ್ಛಿಸುವವರು ಕೂಡಲೇ ಸಂಘದ ಕಾರ್ಯಾಲಯದಲ್ಲಿ ತಮ್ಮ ತಂಡದ ಹೆಸರನ್ನು ನೋಂದಾಯಿಸಬಹುದಾಗಿದೆ. ಒಂದು ತಂಡದಲ್ಲಿ 6 ಜನ ಸದಸ್ಯರು ಇರಲೇಬೇಕು. ಈಗಾಗಲೇ ತಂಡಗಳ ಹೆಸರುಗಳು ಬಂದಿವೆ. ಭಾಗವಹಿಸುವ ಪ್ರತೀ ತಂಡಕ್ಕೆ ರೂ. 6000/–ವನ್ನು ನೀಡಲಾಗುವುದು.

ಮಾರ್ಚ್ 11 ರಿಂದ 18ರವರೆಗೆ ವೀರರಾಣಿ ಅಬ್ಬಕ್ಕ ರಾಷ್ಟ್ರೀಯ ಉತ್ಸವವನ್ನು ಮಹಿಳಾ ದಿನಾಚರಣೆ, ಯುಗಾದಿಯ ಅಂಗವಾಗಿ ಆಯೋಜಿಸಲಾಗಿದೆ. ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ನೃತ್ಯ, ಸಾಹಿತ್ಯ, ಕಲೆ ಮುಂತಾದವುಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡ 100 ಮಹಿಳೆಯರನ್ನು ಅಭಿನಂದಿಸಲಾಗುವುದು.

ದೆಹಲಿಯ ಪ್ರಸಿದ್ಧ ಹೋಲಿ ಫ್ಯಾಮಿಲ್ ಆಸ್ಪತ್ರೆಯ ಆಯುರ್ವೇದ ವೈದ್ಯರಾದ ಡಾ. ಭೀಮ ಭಟ್ ಅವರು ಏಪ್ರಿಲ್ 25ರಂದು ವೈಯಕ್ತಿಕ ಮತ್ತು ಶಾರೀರಿಕ ಮಾನಸಿಕ ಪ್ರಕೃತಿಯ ಕುರಿತು ಉಪನ್ಯಾಸ ನೀಡಲಿದ್ದಾರೆ. ಈ ಉಪನ್ಯಾಸ ಕಾರ್ಯಕ್ರಮವನ್ನು 2.00ಗಂಟೆಗೆ ಸೆಮಿನಾರ್ ಹಾಲ್‌ನಲ್ಲಿ ಆಯೋಜಿಸಲಾಗುವುದು, ಸದಸ್ಯರು ಇದರ ಲಾಭವನ್ನು ಪಡೆಯಬೇಕಾಗಿ ವಿನಂತಿ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**2018 ಮಾರ್ಚ್ 11** — ಭಾನುವಾರ ಸಂಜೆ : 4.00 ಗಂಟೆಗೆ

ದೆಹಲಿ ಕರ್ನಾಟಕ ಸಂಘ ಮತ್ತು ಮಂಗಳೂರು ಜಿಲ್ಲಾಡಳಿತ ಸಹಯೋಗದೊಂದಿಗೆ ವೀರರಾಣಿ ಅಬ್ಬಕ್ಕ ರಾಷ್ಟ್ರೀಯ ಉತ್ಸವ ಉದ್ಘಾಟನೆ. ಸಂಗಮ ಕಲಾವಿದರು, ಮಣಿಪಾಲ ಪ್ರಸ್ತುತಪಡಿಸುವ ತುಳು ನಾಟಕ–ವಾಲಿ ವಧೆ

**2018 ಮಾರ್ಚ್ 12** — ಸಂಜೆ : 6.30 ಗಂಟೆಗೆ

ವೀರರಾಣಿ ಅಬ್ಬಕ್ಕ ಕುರಿತ ಉಪನ್ಯಾಸ– ಮರಾಠಿ

**2018 ಮಾರ್ಚ್ 13** — ಸಂಜೆ : 2.30 ಗಂಟೆಗೆ

ವೀರರಾಣಿ ಅಬ್ಬಕ್ಕ ಕುರಿತ ಉಪನ್ಯಾಸ– ಹಿಂದಿ, ಸ್ಥಳ : ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆವರಣ

**2018 ಮಾರ್ಚ್** — 14, 15 ಮತ್ತು 16 ಸಂಜೆ : 6.30ಗಂಟೆಗೆ

ವೀರರಾಣಿ ಅಬ್ಬಕ್ಕ ಕುರಿತ ಉಪನ್ಯಾಸ– ಮಲೆಯಾಳಂ, ತಮಿಳು ಮತ್ತು ತೆಲುಗು ಸ್ಥಳ : ದೆಹಲಿ ಕರ್ನಾಟಕ ಸಂಘದ ಆವರಣ

**2018 ಮಾರ್ಚ್ 17** — ಸಂಜೆ : 6.30 ಗಂಟೆಗೆ

ವೀರರಾಣಿ ಅಬ್ಬಕ್ಕ ಕುರಿತ ಉಪನ್ಯಾಸ– ಇಂಗ್ಲಿಷ್, ಸ್ಥಳ : ಜೆ.ಎನ್.ಯು. ನವದೆಹಲಿ

**2018 ಮಾರ್ಚ್ 18** — ಭಾನುವಾರ ಬೆಳಿಗ್ಗೆ : 7.00 ಗಂಟೆಗೆ

ಇಂಡಿಯಾ ಗೇಟಿನಲ್ಲಿರುವ 'ಅಮರ ಜವಾನ್ ಜ್ಯೋತಿಗೆ' ನಮನ ಸಲ್ಲಿಕೆ, ವೀರರಾಣಿ ಅಬ್ಬಕ್ಕ ಉತ್ಸವ ಸಮಾರೋಪ ಸಮಾರಂಭ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಡಾ. ಅಹಲ್ಯಾಚಿಂತಾಮಣಿ ಅವರ 'ಅಕವಿತೆ' ಕವನ ಸಂಕಲನ ಬಿಡುಗಡೆ

**2018 ಮಾರ್ಚ್ 24** — ಶನಿವಾರ ಅಪರಾಹ್ನ : 3.00ಗಂಟೆಗೆ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕರ್ನಾಟಕ ವಾರ್ತಾ ಕೇಂದ್ರ ಮತ್ತು ದೆಹಲಿ ಕರ್ನಾಟಕ ಸಂಘದ ಸಂಯುಕ್ತಾಶ್ರಯದಲ್ಲಿ ಜನ್ಮ ರಹಸ್ಯ ಕನ್ನಡ ಚಲನಚಿತ್ರ ಪ್ರದರ್ಶನ

**2018 ಮಾರ್ಚ್ 25** — ಭಾನುವಾರ ಸಂಜೆ: 4.00ಗಂಟೆಗೆ

ಗುರ್‌ಗ್ರಾಮ ಕನ್ನಡ ಸಂಘದಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಚಾಮರಾಜ ಫಿಲ್ಮ್ ಇನ್ಸಿಟ್ಯೂಟ್, ಬೆಂಗಳೂರು ತಂಡದಿಂದ ನೃತ್ಯರೂಪಕ, ಸಮೂಹ ನೃತ್ಯ ಮತ್ತು ಶಾಸ್ತ್ರೀಯ ನೃತ್ಯ ಕಾರ್ಯಕ್ರಮ

**2018 ಏಪ್ರಿಲ್ 1** — ಭಾನುವಾರ ಸಂಜೆ : 5.00ಗಂಟೆಗೆ

ಎಂ.ಎಸ್. ಸತ್ಯು ಪ್ರೊಡಕ್ಷನ್ಸ್ ಅರ್ಪಿಸುವ ಎಂ.ಎಸ್. ಸತ್ಯು ನಿರ್ದೇಶನದ 'ಗುಲ್ ಏ ಬಕಾವಲಿ' ನಾಟಕ ಪ್ರದರ್ಶನ. ರಚನೆ : ಸುಧೀರ್ ಅತ್ತಾವರ

**2018 ಏಪ್ರಿಲ್ 8** — ಭಾನುವಾರ ಅಪರಾಹ್ನ : 2.00ಗಂಟೆಗೆ

ದೆಹಲಿ ಕರ್ನಾಟಕ ಸಂಘದ ವಾಷಿಕೋತ್ಸವ. ವಾರ್ಷಿಕ ಆಟೋಟ ಸ್ಪರ್ಧೆ, ಸಾಂಸ್ಕೃತಿಕ ಸ್ಪರ್ಧೆ ಹಾಗೂ ಅಂಬಿಕೇಶ್ ಕ್ರಿಕೆಟ್ ಪಂದ್ಯಾವಳಿಯ ಬಹುಮಾನ ವಿತರಣೆ ಹಾಗೂ ಸ್ಥಳೀಯ ಕಲಾವಿದರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು

## ಉಪನ್ಯಾಸ ಮಾಲೆ



**ಡಾ. ಭೀಮ ಭಟ್**
**ಅವರಿಂದ "ಆಯುರ್ವೇದದಿಂದ ಆರೋಗ್ಯ" ಉಪನ್ಯಾಸ ಮಾಲೆ**

ಹೋಲಿ ಫ್ಯಾಮಿಲಿ ಆಸ್ಪತ್ರೆಯ ಹಿರಿಯ ಆಯುರ್ವೇದ ವೈದ್ಯರಾದ ಡಾ. ಭೀಮ ಭಟ್ ಅವರು ಮೂರು ದಶಕಗಳಿಂದ ಪ್ರತೀ ತಿಂಗಳ ಕೊನೆಯ ಭಾನುವಾರ ದೆಹಲಿ ಕರ್ನಾಟಕ ಸಂಘದಲ್ಲಿ ಉಚಿತ ವೈದ್ಯಕೀಯ ಸಲಹೆಯನ್ನು ನೀಡುತ್ತಾ ಬಂದಿದ್ದಾರೆ. **ಮಾರ್ಚ್ 25ರ ಭಾನುವಾರ ಮಧ್ಯಾಹ್ನ ಗಂಟೆ 2.00 ರಿಂದ 4.00ರವರೆಗೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ವೈಯಕ್ತಿಕ ಶಾರೀರಿಕ ಮತ್ತು ಮಾನಸಿಕ ಪ್ರಕೃತಿಯ ಕುರಿತು ಉಪನ್ಯಾಸ ಹಾಗೂ ಸಂಜೆ ಗಂಟೆ 5.00ರಿಂದ ಉಚಿತ ವೈದ್ಯಕೀಯ ಸಲಹೆಯನ್ನು** ನೀಡಲಿದ್ದಾರೆ. ಸಂಘದ ಸದಸ್ಯರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

ಅಭಿಮತ ಪ್ರಧಾನ ಸಂಪಾದಕರು
ಬಾಲಕೃಷ್ಣ ನಾಯ್ಕ್ ಡಿ.

ಅಭಿಮತ ಸಂಪಾದಕ ಮಂಡಳಿ
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 28 ಸಂಚಿಕೆ 6
ಮಾರ್ಚ್ 2018

ಅಭಿಮತ
ದೇನಾ ಕನ್ನಡಿಗರ ಸಂಘದ ಅಭಿಮತ

# ಸಂಪಾದಕರ ಟಿಪ್ಪಣಿಗಳು

## ಸ್ವಾಭಿಮಾನದ ಸಂಕೇತ ನಾಡಧ್ವಜ

ತಮ್ಮ ತಮ್ಮ ನಾಡಿನ ಅಸ್ಮಿತತೆಯನ್ನು ಪ್ರದರ್ಶಿಸಲು ಸಂಕೇತಗಳನ್ನು ಮತ್ತು ಲಾಂಛನಗಳನ್ನು ಉಪಯೋಗಿಸುವುದು ರಾಜಕೀಯ ಒಕ್ಕೂಟಗಳು ಮಾಡಿಕೊಂಡಿರುವಂತಹ ವಿಧಿಗಳಾಗಿವೆ. ಕೇಸರಿ, ಬಿಳಿ, ಹಸಿರು ಬಣ್ಣದ ನಮ್ಮ ರಾಷ್ಟ್ರಧ್ವಜವು ನಮ್ಮ ಸತ್ವ ಮತ್ತು ಧೈರ್ಯ, ಶಾಂತಿ ಮತ್ತು ಸತ್ಯ, ಫಲವತ್ತತೆ ಮತ್ತು ಅಭಿವೃದ್ಧಿಯನ್ನು ಸಾರುತ್ತದೆ. ಅಂತೆಯೇ ಧರ್ಮಚಕ್ರದಲ್ಲಿ ನಿಂತ ಸಿಂಹಗಳು ನಮ್ಮ ರಾಷ್ಟ್ರೀಯ ಲಾಂಛನವಾಗಿದೆ. ಕನ್ನಡಿಗರ ಅಸ್ಮಿತೆಯನ್ನು ತೋರಿಸುವ ಗಂಡಭೇರುಂಡದ ಲಾಂಛನ, 'ಜಯ ಭಾರತ ಜನನಿಯ ತನುಜಾತೆ' ನಾಡಗೀತೆಗಳ ಜತೆಗೆ ನಾವು ಹಾರಿಸುತ್ತಿದ್ದ ಕೆಂಪು ಹಳದಿ 'ಕನ್ನಡ ಬಾವುಟ'ವು ಕೆಲವು ಮಾರ್ಪಾಡುಗಳನ್ನು ಪಡೆದು ಅಧಿಕೃತವಾಗುವತ್ತ ಕೆಲಸಗಳು ನಡೆದಿವೆ. ಕರ್ನಾಟಕಕ್ಕೆ ಒಂದು ಅಧಿಕೃತ ಬಾವುಟ ದೊರೆಯುವ ಸಮಯ ಬಂದಿದೆ. ಅಂತಿಮಗೊಳಿಸಿದ ಬಾವುಟವು ಮೂರು ಬಣ್ಣ ಮತ್ತು ರಾಜ್ಯ ಲಾಂಛನವನ್ನು ಹೊಂದಿರುತ್ತದೆ. ಸಕರಾತ್ಮಕತೆ ಮತ್ತು ಸಂಭ್ರಮದ ಸಂಕೇತವಾದ ಹಳದಿ, ಧೈರ್ಯ, ಶೌರ್ಯ ಮತ್ತು ಸ್ವಾಭಿಮಾನವನ್ನು ಪ್ರತಿಬಿಂಬಿಸುವ ಕೆಂಪು ಬಣ್ಣಗಳ ನಡುವೆ ಶಾಂತಿಸೂಚಕ ಬಿಳಿ ಬಣ್ಣವಿದ್ದು ಸರಕಾರದ ಲಾಂಛನವು ನೀಲಿ ಬಣ್ಣದಲ್ಲಿದೆ. ರಾಜ್ಯ ಸರಕಾರವು ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಈ ವಿನ್ಯಾಸದ ನಾಡಧ್ವಜವನ್ನು ಅಧಿಕೃತಗೊಳಿಸಿ ಕೇಂದ್ರ ಸರಕಾರದ ಅನುಮತಿಗೆ ದಾಖಲೆ ಸಮೇತ ಕಳುಹಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿದರೆ ಇನ್ನಾವ ರಾಜ್ಯವು ತನ್ನದೇ ನಾಡಧ್ವಜವನ್ನು ಹೊಂದಿಲ್ಲ. ಒಂದು ರಾಜ್ಯಕ್ಕೆ ತನ್ನದೇ ಆದ ಪ್ರತ್ಯೇಕ ಧ್ವಜವು ಬೇಕೇ ಎಂದು ಪ್ರಶ್ನೆಗಳು ಕೂಡಾ ಕೇಳಿ ಬರುತ್ತಿವೆ. ಭಾರತದ ಧ್ವಜ ಸಂಹಿತೆ ಮತ್ತು ಸರಕಾರದ ಲಾಂಛನ ಕಾಯಿದೆಯಲ್ಲಿ ಯಾವುದೇ ರಾಜ್ಯದ ಧ್ವಜದ ಕುರಿತು ವಿವರವಿಲ್ಲ. ಅಲ್ಲಿರುವುದು ತ್ರಿವರ್ಣ ಧ್ವಜದ ದುರ್ಬಳಕೆಯಾಗದಂತಹ ವಿವರಗಳು. ಹಾಗಾಗಿ ರಾಜ್ಯವೊಂದು ಪ್ರತ್ಯೇಕ ಧ್ವಜ ಹೊಂದಬಾರದು ಎಂಬ ನಿರ್ಬಂಧ ಸಂವಿಧಾನದಲ್ಲಿ ಇಲ್ಲದಿರುವುದರಿಂದ ಕರ್ನಾಟಕ ರಾಜ್ಯವು ಸಲ್ಲಿಸಿರುವ ಪ್ರಸ್ತಾವನೆಯನ್ನು ಕೇಂದ್ರ ಸರಕಾರವು ಅಂಗೀಕರಿಸಲು ಕಾನೂನಿನ ತೊಡಕು ಕಾಣುತ್ತಿಲ್ಲ. ಕರ್ನಾಟಕದ ನಾಡಧ್ವಜವನ್ನು ರಾಷ್ಟ್ರೀಯ ದಿನಗಳಾದ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವ ಸಂದರ್ಭಗಳಲ್ಲಿ ಬಳಸಲಾಗುವುದಿಲ್ಲ. ಅದು ಕನ್ನಡನಾಡಿನ ಜನರ ಸ್ವಾಭಿಮಾನದ ಸಂಕೇತವೇ ಹೊರತು ಸರಕಾರದ ಧ್ವಜವಾಗಿರುವುದಿಲ್ಲ. ನಾಡಧ್ವಜವನ್ನು ಸ್ವಾಗತಿಸುವವರು ರಾಷ್ಟ್ರಗೀತೆಯ ಜತೆಗೆ ನಾಡಗೀತೆ ಇದೆ. ಅದೇ ರೀತಿ ರಾಷ್ಟ್ರ ಧ್ವಜದ ಜತೆಗೆ ನಾಡಧ್ವಜ ತಪ್ಪೇನಿಲ್ಲ ಎನ್ನುತ್ತಾರೆ. ಒಂದೆಡೆ ನಾವೆಲ್ಲರೂ ರಾಷ್ಟ್ರೀಯ ಸಮಗ್ರತೆಯನ್ನು ಯಾವುದೇ ಅನುಮಾನವಿಲ್ಲದೇ ಒಪ್ಪುತ್ತಿರಬೇಕಾದರೆ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳಿಗೂ ಸ್ವಾಯತ್ತೆ ಇರಬೇಕಾಗಿರುವುದು ಅಗತ್ಯವಾಗಿದೆ. ಈಗಾಗಲೇ ನಮ್ಮ ನಾಡಗೀತೆಯಲ್ಲಿ ಭಾರತವು ನಮ್ಮ ಜನನಿ, ಕರ್ನಾಟಕವು ಭಾರತದ ತನುಜಾತೆ ಎಂಬ ಸ್ಪಷ್ಟ ಅರ್ಥವಿರುವ ಸಾಮರಸ್ಯರ ಗುಣಗಳನ್ನು ವ್ಯಕ್ತಪಡಿಸಲಾಗಿದೆ. ಇಂತಹವೇ ಭಾವನೆಯು ನಾಡಧ್ವಜವನ್ನು ಬಳಸುವಾಗ ಮಾಡಲಾಗುವುದು ಎಂದು ಸರಕಾರವು ಪ್ರಸ್ತಾವನೆಯಲ್ಲಿ ತಿಳಿಸಿದೆ.

ಕೇಂದ್ರ ಸರಕಾರಕ್ಕೆ ತಲುಪಿಸಿರುವ ಈ ಪ್ರಸ್ತಾವನೆಯನ್ನು ಅಂಗೀಕರಿಸಲು ರಾಜ್ಯದ ಜನರ ಪ್ರತಿನಿಧಿಯಾಗಿ ಆಯ್ಕೆಯಾಗಿ ಬಂದಿರುವ ನಮ್ಮ ಸಂಸತ್ ಸದಸ್ಯರು ಕೇಂದ್ರದ ಮೇಲೆ ಒತ್ತಡ ಹೇರಿ ಕನ್ನಡದ ಅಸ್ಮಿತೆಯನ್ನು ಬಿಂಬಿಸುವ ನಾಡಧ್ವಜಕ್ಕೆ ಒಪ್ಪಿಗೆ ದೊರಕಬೇಕು. ಸುಮಾರು ಐದು ದಶಕಗಳಿಗಿಂತ ಮುಂಚೆ ಕನ್ನಡ ಭಾಷೆಗಾಗಿ ಹಳದಿ ಕೆಂಪು ಬಣ್ಣದ ಪ್ರತ್ಯೇಕ ಧ್ವಜವನ್ನು ರೂಪಿಸಿದ ನಂತರ ಈಗ ಕೇಂದ್ರ ಸರಕಾರದ ಅನುಮತಿಯಿಂದ ಅದು ಅಧಿಕೃತವಾಗಬೇಕಾಗಿದೆ.

ಬಾನಾಡಿ

ಬಾಲಕೃಷ್ಣ ನಾಯ್ಕ್ ಡಿ.






# ಡಾ. ಭೀಮ ಭಟ್ ಅವರಿಂದ ‘ಆಯುರ್ವೇದದಿಂದ ಆರೋಗ್ಯ’ ಉಪನ್ಯಾಸ

ದೆಹಲಿ ಕರ್ನಾಟಕ ಸಂಘ ಕರ್ನಾಟಕದ ಸಾಹಿತ್ಯ ಕಲೆ ಸಂಸ್ಕೃತಿಗಳ ವೈವಿಧ್ಯಮಯ ಹಾಗೂ ವರ್ಣ ರಂಜಿತವಾದ ಕಾರ್ಯಕ್ರಮಗಳನ್ನು ಕೊಡುತ್ತಾ ಬಂದು ತನ್ನ ಸದಸ್ಯರೆಲ್ಲರ ಪ್ರೀತಿ ಪಾತ್ರವಾಗುತ್ತ ಉತ್ತರೋತ್ತರ ಪ್ರಗತಿ ಸಾಧಿಸುತ್ತಿರುವುದಕ್ಕೆ ತನ್ನ ಎಲ್ಲ ಸದಸ್ಯರುಗಳು ಕಾರ್ಯಕಾರಿ ಸಮಿತಿಯ ಜೊತೆ ನಿಂತು ನೀಡುತ್ತಿರುವ ಸಹಕಾರ, ಪ್ರೋತ್ಸಾಹ ಮತ್ತು ತೋರುತ್ತಿರುವ ಉತ್ಸಾಹ ಬಹುಮುಖ್ಯ ಕಾರಣ ಎಂಬುದು ಸಂತಸದ ವಿಷಯ. ಈಗ ಮತ್ತೊಂದು ಒಳ್ಳೆಯ ಕಾರ್ಯಕ್ರಮವನ್ನು ನಮ್ಮ ಎಲ್ಲ ಸದಸ್ಯರಿಗೆ ನೀಡುವುದಕ್ಕೆ ಅಂತರ ರಾಷ್ಟ್ರೀಯ ಖ್ಯಾತಿಯನ್ನು ಗಳಿಸಿರುವ, ನಮ್ಮ ಸಂಘದ ಆಜೀವ ಸದಸ್ಯರೂ ಮತ್ತು ದೆಹಲಿಯ ಹೋಲಿ ಫ್ಯಾಮಿಲಿ ಆಸ್ಪತ್ರೆಯ ಹಿರಿಯ ಆಯುರ್ವೇದ ವೈದ್ಯರೂ ಆದ ಡಾ. ಭೀಮಭಟ್ ಅವರು ಸ್ವತಃ ಆಸಕ್ತಿಯಿಂದ ಮುಂದೆ ಬಂದು ‘ಆಯುರ್ವೇದದಿಂದ ಆರೋಗ್ಯ’ ಉಪನ್ಯಾಸ ಕಾರ್ಯಕ್ರಮವನ್ನು ನಡೆಸಿಕೊಡುತ್ತಿರುವುದು ಅತ್ಯಂತ ಹೆಮ್ಮೆಯ ಸಂಗತಿ. ಕಳೆದೆ ಸುಮಾರು 35 ವರ್ಷದಿಂದ ನಿರಂತರವಾಗಿ ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕೊನೆಯ ಭಾನುವಾರ ಉಚಿತ ವೈದ್ಯಕೀಯ ಸಲಹೆಗಳನ್ನು ನೀಡುತ್ತಾ ಬಂದಿದ್ದಾರೆ. ಕಷ್ಟ ಪಟ್ಟು ದುಡಿದ ಹಣ, ಪರಿಶ್ರಮ, ಅಮೂಲ್ಯ ಸಮಯಗಳನ್ನು ನೀಡಿದರೂ ಉತ್ತಮ ಮತ್ತು ನುರಿತ ವೈದ್ಯರು ಸಿಗುವುದು ಕಷ್ಟ ಸಾಧ್ಯ, ಸಿಕ್ಕರೂ ನಮ್ಮ ಭಾಷೆಯಲ್ಲಿ ನಮ್ಮ ನೋವುಗಳನ್ನು ಅವರೊಡನೆ ಹಂಚಿಕೊಳ್ಳುವುದು ಇನ್ನೂ ಕಷ್ಟದ ಮಾತೆ ಸರಿ. ಹೀಗಿರಬೇಕಾದರೆ ನಮ್ಮ ಸಂಘದ ಸದಸ್ಯರು ತಮ್ಮ ಅನುಭವಗಳನ್ನು ಉಚಿತವಾಗಿ ಎಲ್ಲ ಹೊರನಾಡ ಕನ್ನಡಿಗರಿಗೆ ಸಿಗುವಂತಾಗಲೆಂಬ ಮಹದಾಸೆಯಿಂದ ಮುಂದೆ ಬಂದಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿ ಇದಕ್ಕಾಗಿ ದೆಹಲಿ ಕರ್ನಾಟಕ ಸಂಘದ ಎಲ್ಲ ಸದಸ್ಯರ ಪರವಾಗಿ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಸಿ. ಎಂ. ನಾಗರಾಜ ಅವರು ಡಾ. ಭೀಮ್ ಭಟ್ ಅವರಿಗೆ ಪುಷ್ಪ ಗುಚ್ಛ ನೀಡಿ ಸ್ವಾಗತಿಸಿ, ‘ಆಯುರ್ವೇದದಿಂದ ಆರೋಗ್ಯ’ ಕುರಿತ ಉಪನ್ಯಾಸಕ್ಕೆ ಚಾಲನೆ ನೀಡಿದರು. ಇದೇ ಫೆಬ್ರವರಿ 25 ರಿಂದ ‘ಆಯುರ್ವೇದದಿಂದ ಆರೋಗ್ಯ’ ಉಪನ್ಯಾಸ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾರೆ.

ಆಯುರ್ವೇದದಲ್ಲಿ ಆರೋಗ್ಯವಾಗಿರಬೇಕಾದರೆ ಏನು ಮಾಡಬೇಕು? ಎಷ್ಟು ಹೊತ್ತಿಗೆ ನೀವು ಏಳಬೇಕು? ನಿಮ್ಮ ದೇಹವನ್ನು ಯಾವ ರೀತಿ ಸ್ವಚ್ಛ ಇಡಬೇಕು? ನಮ್ಮ ಮನಸ್ಸು ಹೇಗೆ ಸ್ವಚ್ಛವಾಗಿಡಬೇಕು? ಎಂಬಿತ್ಯಾದಿ ವಿವರಗಳಿವೆ. ಆಯುರ್ವೇದ ಅನ್ನೋದು ಮದರ್ ಮೆಡಿಕಲ್ ಸೈನ್ಸ್ ಆಫ್ ಆಲ್ ದ ಮೆಡಿಕಲ್ ಸೈನ್ಸ್‌ಸ್. ದೇವರು ಸೃಷ್ಟಿ ಯಾವಾಗ ಮಾಡಿದ್ನೋ ಆವಾಗಲೇ ಬ್ರಹ್ಮನೇ ಈ ಆಯುರ್ವೇದವನ್ನು ಸೃಷ್ಟಿ ಮಾಡಿರೋದು ಎಂದು ಆಯುರ್ವೇದ ಪುಸ್ತಕದಲ್ಲಿ ಬರೆದಿದೆ ಎಂದರು. ನಮ್ಮ ಆಯುರ್ವೇದದಲ್ಲಿ ಆಶ್ವ ಆಯುರ್ವೇದ, ಗಜ ಆಯುರ್ವೇದ, ಶ್ವಾನ ಆಯುರ್ವೇದ, ವೆಟರನಿ ಸೈನ್ಸ್ ಕೂಡಾ ಇದೆ ಇದರಲ್ಲಿ, ಬರೀ ಹ್ಯೂಮನ್ ಬೀಯಿಂಗ್‌ಗೆ ಒಂದೇ ಅಲ್ಲ ಇದು, ಪ್ರಾಣಿಗಳಿಗೂ ಇದೆ, ಸಸ್ಯಗಳಿಗೂ ಈ ಒಂದು ಆಯುರ್ವೇದ ಇದೆ. ನಮ್ಮಲ್ಲಿ ಎಷ್ಟೆಲ್ಲಾ ಗಿಡ ಮೂಳಿಕೆಗಳಿವೆ, ಈ ಎಲ್ಲಾ ಗಿಡಮೂಳಿಕೆಗಳು ನಮಗೆ ಬಹಳ ಉಪಯೋಗ ವಾಗುವಂತದ್ದು, ಶುಂಠಿ, ಕರಿಬೇವು, ಬೇವು ಹೀಗೆ ಸುಮಾರು ಪ್ಲಾಂಟ್ಸ್‌ಗಳು ನಿಮ್ಮ ಎದುರಿಗೆ ಇವೆ. ಅದು ಎದುರುಗಡೆ ಇದ್ದರೂ ಕೂಡಾ ಅದು ಏನೂಂತ ಗೊತ್ತಿಲ್ಲ ನಮಗೆ. ಅದನ್ನು ಯಾವ ತರ ಉಪಯೋಗ ಮಾಡಬೇಕೂಂತ ಗೊತ್ತಿಲ್ಲ ನಮಗೆ. ಮನೆಯಲ್ಲಿ ಮಗೂಗೆ ತುಂಬಾ ಕೆಮ್ಮು ಇದೆ, ಕೆಮ್ಮು ಇದ್ದರೆ ಏನು ಮಾಡಬೇಕು, ಕೂಡಲೇ ಆಸ್ಪತ್ರೆಗೆ ಕೊಂಡು ಹೋದರೆ ಡಾಕ್ಟರ್ ಆ್ಯಂಟಿ ಬಯೋಟಿಕ್ ಕೊಡುತ್ತಾರೆ, ಆ್ಯಂಟಿ ಬಯೋಟಿಕ್ ದೇಹದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂದರು.

ಆಯುರ್ವೇದದಲ್ಲಿ ಇಂತಿಂಥ ಕಾಯಿಲೆಗೆ ಇಂತಿಂಥ ಆಯುರ್ವೇದ ಔಷಧಿ ಒಳ್ಳೆದು ಎಂದಿದೆ. ಕೆಲವು ಕಾಯಿಲೆಗೆ ನಾವು ಅಲೋಪಥಿ ಮಾಡುವುದು ಒಳ್ಳೆಯದು. ಕಾಲ್‌ಬಾರ್ಡರ್ ಸ್ಟೋನ್ ಕಾಯಿಲೆ ಬಹಳ ಕಷ್ಟದಿಂದ ಆಯುರ್ವೇದದಲ್ಲಿ ಕಡಿಮೆಯಾಗುತ್ತೆ ಹಾಗಾಗಿ ಅದಕ್ಕೆ ಆಪರೇಷನ್ ಮಾಡಲು ಎಂದು ನಾವು ಸಲಹೆಯನ್ನು ನೀಡಬಹುದು ಎಂದರು. ಆಯುರ್ವೇದ ಡಾಕ್ಟರ್‌ಗಳು ತಮ್ಮಲ್ಲಿ ಏನು ಲಿಮಿಟೇಶನ್ ಇದೆ ಅದನ್ನು ಅರ್ಥ ಮಾಡಿಕೊಂಡು ಸರಿಯಾಗಿ ಗೈಡ್ ಮಾಡಬೇಕು ಎಂದರು.

ನಮ್ಮ ದೇಶದಲ್ಲಿ ನಮ್ಮ ಆರೋಗ್ಯದ ಬಗ್ಗೆ ಸರ್ಕಾರ ಯಾವುದೇ ಮುತುವರ್ಜಿ ವಹಿಸುವುದಿಲ್ಲ, ನಮ್ಮ ಆರೋಗ್ಯದ ಬಗ್ಗೆ ನಾವು ಮುತುವರ್ಜಿ ವಹಿಸಬೇಕು, ನಮ್ಮ ಕುಟುಂಬದವರು ಮುತುವರ್ಜಿ ವಹಿಸಬೇಕು ಎಂದರು. ಜಪಾನ್‌ನ ಯೋಕಿನಾ ಎಂಬ ಜಾಗದಲ್ಲಿ ಅಲ್ಲಿಯ ಜನರು ಸಾಧಾರಣ 110 ವರ್ಷ ಬದುಕುತ್ತಾರೆ ಅಲ್ಲಿಯ ಜನರ ಆರೋಗ್ಯದ ಬಗ್ಗೆ ಜಪಾನ್ ಸರ್ಕಾರವೇ ಮುತುವರ್ಜಿ ವಹಿಸುತ್ತದೆ ಎಂದರು.

ಭಗವಂತನ ಸೃಷ್ಟಿಯಲ್ಲಿ ಒಂದು ಲಕ್ಷದ ಎಂಬತ್ತೆರಡು ಸಾವಿರ ಜೀವಜಂತು ಇದೆ ಅದರಲ್ಲಿ ಮನುಷ್ಯ ಒಬ್ಬ. ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಜೀವನದಲ್ಲಿ ಒಂದು ಗುರಿ ಇರುತ್ತದೆ. ಎಲ್ಲರಿಗೂ ನಾನು ತುಂಬಾ ವರ್ಷ ಬದುಕಬೇಕು, ಆರೋಗ್ಯವಾಗಿರಬೇಕು ಬರೀ ಇರೋದು ಒಂದೇ ಅಲ್ಲ. ನಾವು ಹಿರಿಯರಿಗೆ ನಮಸ್ಕಾರ ಮಾಡಿದಾಗ, ಮಕ್ಕಳಿಗೆ ಸಂಸ್ಕೃತದಲ್ಲಿ ಆಯುಷ್ಮಾನ್ ಭವ, ಧೀರ್ಘ ಸುಮಂಗಲೀ ಭವ ಎಂದು ಆಶೀರ್ವದಿಸುತ್ತಾರೆ. ಭಗವಂತನು ಮನುಷ್ಯನಿಗೆ, ಪ್ರಾಣಿಗಳಿಗೆ ಇಷ್ಟು ವಯಸ್ಸು ಎಂದು ಬರೆದಿರುತ್ತಾನೆ ಎನ್ನುತ್ತಾರೆ. ಸರಿಯಾಗಿ ಆರೋಗ್ಯ ಇದ್ದರೆ 120 ಯಾಕೆ 220 ವರ್ಷವೂ ಮನುಷ್ಯ ಬದುಕಿ ಇದ್ದು ಸೇವೆ ಮಾಡಬಹುದು. ಜಪಾನ್‌ನಲ್ಲಿ 117 ವರ್ಷ ಬದುಕಿದವರನ್ನು ನೋಡಿದ್ದೇನೆ ಎಂದರು.

ಡಾ. ಭೀಮ ಭಟ್ ಅವರು ದೆಹಲಿ ಕರ್ನಾಟಕ ಸಂಘಕ್ಕೆ 1982ರಲ್ಲಿ ಸದಸ್ಯನಾಗಿ ಏನಾದರೂ ಸಂಘಕ್ಕೆ, ಕನ್ನಡರಿಗೆ ಏನಾದರೂ ಸೇವೆ ಮಾಡಬೇಕು ‘ಎಲ್ಲಿ ಹೋದರೂ ಏನಾದರೂ ಸೇವಾ ಮನೋಭಾವನೆಬೇಕು’ ಎಂಬ ಅವರ ತಂದೆಯ ಇಚ್ಛೆಯಂತೆ ಸಂಘದಲ್ಲಿ ಉಚಿತ ವೈದ್ಯಕೀಯ ಸಲಹೆ ಮತ್ತು ಉಪನ್ಯಾಸವನ್ನು ಆರಂಭಿಸಿದೆ ಎಂದರು. ದೆಹಲೀಯಲ್ಲಿ ಮೊದಲು ಮೂಲ್‌ಚಂದ್ ಆಸ್ಪತ್ರೆಯಲ್ಲಿ ಆಯುರ್ವೇದ ಕೇಂದ್ರ ಇತ್ತು. ನಮ್ಮ ಆಸ್ಪತ್ರೆಯಲ್ಲಿ ಆಯುರ್ವೇದ ಪ್ರಾರಂಭಿಸಿ, ಆಯುರ್ವೇದ ಎಕ್ಸ್‌ಪಾಂಡ್ ಮಾಡಿ ಅಭಿವೃದ್ಧಿ ಆದ ಮೇಲೆ ಈಗ ಭತ್ರ ಹಾಸ್ಪಿಟಲ್, ಮೇಧಾಂತ ಹಾಸ್ಪಿಟಲ್, ಅಪೋಲೋ ಹಾಸ್ಪಿಟಲ್ ಆಯುರ್ವೇದ ಕೇಂದ್ರಗಳು ಆರಂಭವಾಗಿವೆ ಎಂದರು.

ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಕೆ. ಭಟ್, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಡಾ. ಎಂ.ಎಸ್. ಶಶಿಕುಮಾರ್, ಶ್ರೀ ರಾಧಾಕೃಷ್ಣ, ಅಭಿಮತ ಸಂಪಾದಕ ಮಂಡಳಿಯ ಶ್ರೀ ಚಂದ್ರಶೇಖರ ಎನ್.ಪಿ. ಹಾಗೂ ಇನ್ನಿತರ ಸದಸ್ಯರುಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀ ಸಿ.ಎಂ. ನಾಗರಾಜ ಅವರು ವಂದಿಸಿದರು. ಅ

***ಅಭಿಮತ ವರದಿ***



ರಾಜ್ಯೋತ್ಸವದ ದಿನದಂದು ವಿಶೇಷ ಸನ್ಮಾನಿತರಾದ ಅಂತರರಾಷ್ಟ್ರೀಯ ಖ್ಯಾತಿಯ ಆಯುರ್ವೇದ ವೈದ್ಯರಾದ **ಡಾ. ಭೀಮ ಭಟ್** ಆಯುರ್ವೇದ ಪದವಿ ವಿದ್ಯಾಭ್ಯಾಸವನ್ನು ಬೆಂಗಳೂರಿನ ಆಯುರ್ವೇದ ಕಾಲೇಜಿನಲ್ಲಿ ನಡೆಸಿ ಎಲ್ಲಾ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಅದಕ್ಕಿಂತಲೂ ಮೊದಲು ಅವರು ಮಣಿಪಾಲದಲ್ಲಿ ಡಿಪ್ಲೋಮಾ ಇನ್ ಫಾರ್ಮಸಿ ಓದಿದ್ದರು. ಅವರ ಕಾಲೇಜು ವಿದ್ಯಾಭ್ಯಾಸ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ನಡೆಯಿತು. ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಆನವಟ್ಟಿ ಗ್ರಾಮದಲ್ಲಿ ಬಾಲ್ಯದ ವಿದ್ಯಾಭ್ಯಾಸ ಮಾಡಿದ ಡಾ. ಭೀಮ ಭಟ್ ಅವರ ತಂದೆ ದತ್ತಂಭಟ್ಟರು, ತಾಯಿ ಇಂದಿರಾ ಬಾಯಿ. ತಂದೆಯವರು ಸಂಸ್ಕೃತ ವಿದ್ವಾಂಸರು ಮತ್ತು ಪುರೋಹಿತರು. ಇಂದಿನ ಸಮಾಜದಲ್ಲಿ ಎಲ್ಲೆಡೆ ಕಂಡು ಬರುವಂತೆ ಸರ್ಕಾರ ಹಾಗೂ ಖಾಸಗಿಯಾಗಿಯೂ ಸಾಕಷ್ಟು ಸಂಬಳ, ಸಂಭಾವನೆ ಪಡೆಯುವವರೂ ಕೂಡ ತಮ್ಮ ಕರ್ತವ್ಯ ನಿರ್ವಹಿಸುವಾಗ ಗಡಿಯಾರದತ್ತ ನೋಡಿಕೊಂಡು ತಮ್ಮ ವೃತ್ತಿಯ ಪಾವಿತ್ರ್ಯತೆಯನ್ನು ಗಣನೆಗೆ ತೆಗೆದುಕೊಳ್ಳದಿರುವುದೇ ಸಾಮಾನ್ಯ ಸಂಗತಿ. ಹೀಗಿರುವ ಹುಟ್ಟಿದ ನೆಲ, ಮೆಟ್ಟಿದ ನೆಲ ಹಾಗೂ ಸಾಗರದಾಚೆಗಿನ ನೆಲದಲ್ಲೂ ಆಯುರ್ವೇದದ ಅಸ್ಮಿತೆಯನ್ನು ಹರಡಿಸುತ್ತಿರುವ ಡಾ. ಭೀಮ ಭಟ್ ಅವರಿಗೆ ಇದುವರೆಗೆ ಸಂದಿರುವ ಪ್ರಶಸ್ತಿ, ಪುರಸ್ಕಾರ, ಗೌರವಗಳು ಹಲವು. 1994ರಲ್ಲಿ–ಕ್ಯಾಪ್ಟನ್ ಜಿ. ಶ್ರೀನಿವಾಸ ಮೂರ್ತಿ ಸೈಂಟಿಸ್ಟ್ ಗೋಲ್ಡ್ ಮೆಡಲ್; 1995ರಲ್ಲಿ ಭಾರತದ ಪ್ರಧಾನಮಂತ್ರಿಯವರಿಂದ 1996ರಲ್ಲಿ ದೆಹಲಿಯ ಮುಖ್ಯಮಂತ್ರಿಯವರಿಂದ, 1998ರಲ್ಲಿ ದೆಹಲಿಯ ಉಪರಾಜ್ಯಪಾಲರಿಂದ "ಅತೀ ಉತ್ತಮ ಆಯುರ್ವೇದ ತಜ್ಞ" ಎಂಬ ನೆಗಳ್ತೆಗೆ ಪಾತ್ರರಾಗಿ–ಅಕಾಡೆಮಿ ಆಫ್ ಆಯುರ್ವೇದದಿಂದ–'ಪ್ರಾಣಾಚಾರ್ಯ', ಡಾಬರ್‌ನಿಂದ ಧನ್‌ವಂತರಿ, ವಿಶ್ವ ಆಯುರ್ವೇದ ಸಮ್ಮೇಳನದ 'ಆಯುರ್ವೇದ ಕುಲಭೂಷಣ' ಹೀಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಒಟ್ಟು 45 ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಭೀಮ ಭಟ್ಟರು ಅಪ್ಪಟ ಕನ್ನಡಿಗರು ಎಂಬುದು ಸಮಸ್ತ ಕನ್ನಡಿಗರಿಗೂ ಹೆಮ್ಮೆಯ ವಿಷಯ. ಅವರೊಂದಿಗೆ ಅಭಿಮತ ಬಳಗದ **ಚಂದ್ರಶೇಖರ್ ಎನ್.ಪಿ.** ಅವರು ನಡೆಸಿದ ಸಂದರ್ಶನದ ಆಯ್ದಭಾಗ.

# ಅಂತರಾಷ್ಟ್ರೀಯ ಮಟ್ಟದಲ್ಲಿ ಆಯುರ್ವೇದದ ಬಗೆಗೆ ಅರಿವು ಮೂಡಿಸುವ ಕಾರ್ಯಗಳು ಹೆಚ್ಚಿವೆ-ಡಾ. ಭೀಮ ಭಟ್

**ಅಭಿಮತ** : *ನೀವು ವೈದ್ಯಕೀಯ ವೃತ್ತಿ ಆಯ್ಕೆ ಮಾಡಿಕೊಳ್ಳಲು ಪ್ರೇರಣೆ ಯಾರು? ನೀವು ವೈದ್ಯಕೀಯ ವಿದ್ಯಾಭ್ಯಾಸ ಎಲ್ಲಿ ಪೂರ್ಣಗೊಳಿಸಿದಿರಿ?*

**ಡಾ. ಭೀಮ ಭಟ್** : ನನಗೆ ಬಾಲ್ಯದಲ್ಲಿಯೇ ನಮ್ಮ ತಂದೆಯವರು ಸಂಸ್ಕೃತದ ಅಭ್ಯಾಸ ಮಾಡಿಸಿದ್ದರು. ಸಂಸ್ಕೃತದ ಮೂಲಕ ಭಾರತೀಯ ಪರಂಪರೆಯನ್ನು ಚೆನ್ನಾಗಿ ತಿಳಿಯುವ ಅಭಿರುಚಿ ಮಾಡುವ ಮೂಡಿ, ಅನಂತರ ವೇದ ಮಂತ್ರಗಳನ್ನೂ ಚೆನ್ನಾಗಿ ಕರಗತ ಮಾಡಿಕೊಂಡ ನಾನು ಆಯುರ್ವೇದವನ್ನು ಕಲಿತುಕೊಂಡೆ. ಭಾರತದ ವೈದ್ಯ ಶಾಸ್ತ್ರದಲ್ಲಿಯೇ ಹೆಮ್ಮೆಯ ಜ್ಞಾನ ಶಿಸ್ತು ಎಣಿಸಿದ ಆಯುರ್ವೇದವನ್ನು ಕಲಿತ ನಂತರ ಅದರ ಸಾರಸ್ವವನ್ನು ಜನಸಾಮಾನ್ಯರಿಗೂ ತಿಳಿಸುವ ಮತ್ತು ಆ ಮೂಲಕ ಆರೋಗ್ಯಕರ ಸಮಾಜವನ್ನು ರೂಪಿಸಲು ನನ್ನ ಕೈಲಾದ ಪ್ರಯತ್ನ ಮಾಡಬೇಕೆಂಬ ಆಸೆ ನನ್ನಲ್ಲಿ ಮೊಳಕೆಯೊಡೆಯಿತು. 'ಆಯುರ್ವೇದ' ಪದವಿಯನ್ನು ಓದುತ್ತಿರುವಾಗಲೇ ಬೆಂಗಳೂರಿನ ಜಾನಕೀರಾಮನ್ ಎಂಬುವರ ಬಳಿ ಯೋಗವನ್ನೂ ಕಲಿತು ಯೋಗಚಿಕಿತ್ಸೆಯನ್ನೂ ಕೂಡಾ ಕರಗತ ಮಾಡಿಕೊಂಡೆ. ಅನಂತರ 1979ರಲ್ಲಿ ಗುಜರಾತ್‌ನ ಜಾಮ್‌ನಗರದ ಆಯುರ್ವೇದ ವಿಶ್ವವಿದ್ಯಾಲಯದಿಂದ ಎಂ.ಡಿ. ಪದವಿಯನ್ನು ಚಿನ್ನದ ಪದಕದೊಡನೆ ಗಳಿಸಿರುತ್ತೇನೆ.

**ಅಭಿಮತ** : *ನೀವು ದೆಹಲಿಗೆ ಬಂದದ್ದು ಯಾವಾಗ ಮತ್ತು ದೆಹಲಿಯ ಪರಿಸರಕ್ಕೆ ನಿಮ್ಮನ್ನು ಹೊಂದಿಸಿಕೊಳ್ಳಬೇಕಾದ ಸಂದರ್ಭದಲ್ಲಿ ನಿಮ್ಮ ಅನುಭವಕ್ಕೆ ಬಂದ ವಿಶೇಷ ಸಂಗತಿಗಳೇನು?*

**ಡಾ. ಭೀಮ ಭಟ್** : 1979ರ ಆಗಸ್ಟ್‌ನಲ್ಲಿ ದೆಹಲಿಗೆ ಬಂದು ಎಂ.ಎಂ.ಎಲ್. 'ಸೆಂಟರ್ ಫಾರ್ ರೊಮ್ಯಾಟಿಕ್ ಡಿಸೀಸ್' ಸೆಂಟರ್‌ನ ಮುಖ್ಯ ಚಿಕಿತ್ಸಕರಾಗಿ ಸೇರಿಕೊಂಡೆ. ಮೂಲತಃ ಬೋಧನೆಯಲ್ಲಿ ಆಸಕ್ತಿ ಇದ್ದುದರಿಂದ ನಂತರದ ಒಂದೆರಡು ವರ್ಷಗಳ ಕಾಲ ಬಳ್ಳಾರಿಯ 'ತಾರಾನಾಥ ಆಯುರ್ವೇದಿಕ್ ಕಾಲೇಜು' ಪ್ರಾಧ್ಯಾಪಕನಾಗಿ ಕೆಲಸ ಮಾಡಿ ಪುನಃ ದೆಹಲಿಗೆ ಬಂದೆ. ಈ ಹಿಂದೆ ಕೆಲಸ ಮಾಡುತ್ತಿದ್ದ ಸಂಸ್ಥೆಯಲ್ಲಿಯೇ ಜಂಟಿ ನಿರ್ದೇಶಕರಾಗಿ ಸೇರಿಕೊಂಡೆ. ಅದೇ ವೇಳೆಯಲ್ಲಿ ನನ್ನ ಹಿರಿಯ ವೈದ್ಯ ಅಧಿಕಾರಿಗಳು ಭಾರತದ ಘನತೆವೆತ್ತ ರಾಷ್ಟ್ರಪತಿಗಳ ಆಪ್ತ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದರು. ಅವರ ಜೊತೆಗಿರುತ್ತಿದ್ದ ನಾನೂ ಕೂಡ ಆಗಾಗ್ಗೆ ನಾನೂ ಕೂಡಾ ರಾಷ್ಟ್ರಪತಿಗಳ ಮತ್ತು ಇತರ ಗಣ್ಯವ್ಯಕ್ತಿಗಳ ವೈದ್ಯಕೀಯ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದೆ. ಆನಂತರದ ದಿನಗಳಲ್ಲಿ ಸಾಕಷ್ಟು ಜನ ಗಣ್ಯರ ಮಾಜಿ ಪ್ರಧಾನಿಗಳು, ಮಾಜಿ ರಾಷ್ಟ್ರ ಪತಿಗಳ ಹಾಗೂ ಲೋಕಸಭೆಯ ಸ್ಪೀಕರ್ ಆಗಿದ್ದ ಶ್ರೀಮತಿ ಮೀರಾಕುಮಾರ್ ಅವರ ಆಪ್ತ ವೈದ್ಯನಾಗಿ ಸೇವೆ ಸಲ್ಲಿಸಿದ್ದೇನೆ. 1981ರಲ್ಲಿ ಡಾ. ಸುಲೇಖಾ ಭಟ್ ಅವರನ್ನು ವಿವಾಹ ಮಾಡಿಕೊಂಡು ದೆಹಲಿಯ ಪೂಸಾ ರೋಡ್‌ನಲ್ಲಿ ವಾಸಿಸುತ್ತಿದ್ದೆ. ನನ್ನ ಧರ್ಮಪತ್ನಿ ಕೂಡಾ ಆಯುರ್ವೇದ ವೈದ್ಯೆಯಾಗಿದ್ದಾರೆ. ಮಗ ಅಭಿಷೇಕ್ ಭಟ್, ಒಬ್ಬಳು ಮಗಳು ಅಂಕಿತ ಭಟ್ ಮತ್ತು ಸೊಸೆ ಡಾ. ಸಿಂಧೂರಿ. ನನ್ನ ಮಗ ಅಮೇರಿಕಾದ ಜಾಕ್ಸನ್ ಮೆಮೋರಿಯಲ್ ಹಾಸ್ಪಿಟಲ್, ಮಾಯಾಮಿನಲ್ಲಿ ಸೂಪರ್ ಸ್ಪೆಶಲಿಸ್ಟ್ (ಯೂರೋ ಅಂಕಾಲಜಿ). ನನ್ನ ಮಗಳು ಯುನೈಟೆಡ್ ನೇಶನ್ಸ್‌ನ ಮಹಿಳಾ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದು ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಜೊತೆ ನೇರ ಸಂಪರ್ಕ ಮತ್ತು ಸೇವೆಯಲ್ಲಿದ್ದಾರೆ.

**ಅಭಿಮತ**: *ದೆಹಲಿಯಲ್ಲಿ ನಿಮ್ಮ ಮತ್ತು ಕನ್ನಡಿಗರ / ದೆಹಲಿ ಕರ್ನಾಟಕ ಸಂಘದ ಜೊತೆಗಿನ ಒಡನಾಟ ಹೇಗಿತ್ತು?*

**ಡಾ. ಭೀಮ ಭಟ್** : ದೆಹಲಿ ಕರ್ನಾಟಕ ಸಂಘದ ಜೊತೆ ಕೂಡಾ ಮೊದಲಿನಿಂದಲೂ ನಿರಂತರವಾಗಿ ಸಂಪರ್ಕದಲ್ಲಿ ಇದ್ದೇನೆ. ದೆಹಲಿಯಲ್ಲಿದ್ದ ಕರ್ನಾಟಕದ ಗಣ್ಯರುಗಳಾದ ದಿವಂಗತರಾದ ಡಾ. ಸರೋಜಿನಿ ಮಹಿಷಿ, ಎನ್.ಜೆ. ಕಾಮತ್, ಕೆ.ಆರ್. ನಾಗರಾಜ್, ಐ. ರಾಮಮೋಹನ ರಾವ್, ಜಸ್ಟಿಸ್ ಎಂ.ಎನ್. ವೆಂಕಟಾಚಲಯ್ಯ ಇವರೆಲ್ಲರ ಜೊತೆ ಹಾಗೂ ಇನ್ನೂ ಅನೇಕರ ಜೊತೆ ಒಳ್ಳೆಯ ಬಾಂಧವ್ಯ ಹೊಂದಿದ್ದೆ. ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆ 'ಅಭಿಮತ'ದಲ್ಲಿ 'ಆರೋಗ್ಯವೇ ಭಾಗ್ಯ' ಅನ್ನುವ ಅಂಕಣವನ್ನು ಪ್ರಾರಂಭಿಸಿದೆ. ಸಾಕಷ್ಟು ಉಪನ್ಯಾಸಗಳನ್ನೂ ಕೂಡಾ ನೀಡಿದ್ದೇನೆ.

**ಅಭಿಮತ** : *ಆಯುರ್ವೇದ ಚಿಕಿತ್ಸೆ ನಮ್ಮ ಭಾರತೀಯ ಪರಂಪರೆಯ ಹೆಮ್ಮೆಯ ಕೊಡುಗೆ. ಆದರೂ ಇಂದಿನ ದಿನಗಳಲ್ಲಿ ಜನ 'ವೇಗ'ದ ಬದುಕಿನ ಹಿಂದೆ ಬಿದ್ದು ತಾಳ್ಮೆಯಿಂದ ತಿಳಿದುಕೊಂಡರೆ ಬದುಕನ್ನೇ ತಿದ್ದಿ, ಬದುಕಿಗೆ ಆರೋಗ್ಯಕರ ತಿರುವು ನೀಡಬಲ್ಲ ಆಯುರ್ವೇದದ ಬಗ್ಗೆ ತಾತ್ಸಾರ ಮನೋಭಾವನೆ*

*ಹೊಂದಿರುವವರೇ ಜಾಸ್ತಿ. ಇಂತಹ ಸನ್ನಿವೇಶದಲ್ಲಿ ಪರಂಪರಾಗತವಾದ ಆಯುರ್ವೇದ ಚಿಕಿತ್ಸಾ ಕ್ರಮವನ್ನು ಕುರಿತು ಭಾರತದಲ್ಲಿ ಮಾತ್ರವಲ್ಲದೇ ವಿದೇಶಗಳಲ್ಲಿಯೂ ಅರಿವು ಮೂಡಿಸುವಂತಹ ಗುರುತರ ಸಾಧನೆ ನೀವು ಮಾಡುತ್ತಿರುವುದು ಶ್ಲಾಘನೀಯ. ಈ ಹಿನ್ನೆಲೆಯಲ್ಲಿ ಇದುವರೆಗೂ ಎಷ್ಟು ದೇಶಗಳಿಗೆ ಭೇಟಿ ನೀಡಿ ಆಯುರ್ವೇದದ ಅರಿವನ್ನು ಪಸರಿಸುವ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದೀರಿ?*

**ಡಾ. ಭೀಮ ಭಟ್:** 1980ರಲ್ಲಿ ದೆಹಲಿಯ ಪ್ರಸಿದ್ಧ ಹೋಲಿ ಫ್ಯಾಮಿಲಿ ಆಸ್ಪತ್ರೆಯಲ್ಲಿ ಆಯುರ್ವೇದ ಚಿಕಿತ್ಸೆ ವಿಭಾಗವನ್ನು ಪ್ರಾರಂಭಿಸಲು ನನಗೆ ಆಹ್ವಾನವಿತ್ತರು. ಆಯುರ್ವೇದ ಮತ್ತು ಅಲೋಪತಿ ಇವರೆಡರ ನಡುವೆ ಸಮತೋಲನ ಸಾಧಿಸುವುದು ನನ್ನ ಉದ್ದೇಶವಾಗಿತ್ತು. ಅಂದರೆ ಅಲೋಪತಿ ವೈದ್ಯರಿಗೆ ಆಯುರ್ವೇದದ ಮಹತ್ವವನ್ನು ಮನದಟ್ಟು ಮಾಡಿಕೊಡುವುದಕ್ಕೆ ಅನೇಕ ಉಪನ್ಯಾಸಗಳನ್ನು ಮಾಡಿ ಹಾಗೂ ಸ್ವತಃ ಆಯುರ್ವೇದ ಚಿಕಿತ್ಸೆಯನ್ನು ಪ್ರಾಯೋಗಿಕವಾಗಿ ತೋರಿಸಿ ಅಲೋಪತಿ ವೈದ್ಯರಲ್ಲಿದ್ದ ತಾತ್ಸಾರ ಮನೋಭಾವನೆಯನ್ನು ಹೋಗಲಾಡಿಸಲು ಪ್ರಯತ್ನಿಸಿದ್ದೇನೆ, ಇನ್ನೂ ಪ್ರಯತ್ನಿಸುತ್ತಿದ್ದೇನೆ. ನಾನು ಪಿ.ಜಿ. ಓದುತ್ತಿರುವಾಗಲೇ ಜಪಾನಿನ ವೈದ್ಯಕೀಯ ತಂಡವೊಂದು ಜಾಮ್‌ನಗರದ ನಮ್ಮ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿತ್ತು. ಆಗ ನನಗೆ ಅವರು ಜಪಾನ್ ದೇಶಕ್ಕೆ ಹೋಗಿ ಆಯುರ್ವೇದದ ಬಗೆಗೆ ಅರಿವು ಮೂಡಿಸುವಂತೆ ಆಹ್ವಾನಿಸಿದ್ದರು. ದೆಹಲಿಯಲ್ಲಿ ಒಂದು ದಶಕಕ್ಕೂ ಮೀರಿ ಸೇವೆ ಸಲ್ಲಿಸಿದ ನನಗೆ ವಿದೇಶದಲ್ಲಿ ಕೂಡಾ ಸೇವೆ ಸಲ್ಲಿಸಲು 1994ರಲ್ಲಿ ಜಪಾನಿಗೆ ಹೋಗಿ ಅಂತರರಾಷ್ಟ್ರೀಯ ವೈದ್ಯ ಸಮ್ಮೇಳನದಲ್ಲಿ ಭಾಗವಹಿಸುವ ಅವಕಾಶ ದೊರಕಿತು. 1998ರಿಂದ ಹಲವು ಬಾರಿ ಒಮನ್ ದೇಶಕ್ಕೆ, ಇಂಗ್ಲೆಂಡ್, ಬ್ರೆಜಿಲ್, ಇಟಲಿ, ಫ್ರಾನ್ಸ್, ಸ್ವೀಡನ್ ದೇಶಗಳಿಗೆ ಭೇಟಿ ನೀಡಿ ಆಯುರ್ವೇದದ ಅರಿವು ಮೂಡಿಸಿದ್ದೇನೆ. ವಿಶೇಷವೇನೆಂದರೆ ನನ್ನ ಉಪನ್ಯಾಸಗಳಿಂದ ಪ್ರಭಾವಿತಗೊಂಡ ಜಪಾನ್ ಸರ್ಕಾರ ಆಯುರ್ವೇದದ ಬಗೆಗೆ ಆಸಕ್ತಿ ತಾಳಿ ಅಲ್ಲಿ ಹೆಲ್ತ್ ರೆಸಾರ್ಟ್ ಸ್ಥಾಪಿಸುವಂತೆ ನನಗೆ ಆಹ್ವಾನ ನೀಡಿತು. ನಾನು ಸುಮಾರು 10 ವರ್ಷಗಳಿಂದಲೂ ವರ್ಷಕ್ಕೊಮ್ಮೆ ಜಪಾನ್‌ಗೆ ಹೋಗಿ ಆಯುರ್ವೇದ ತರಗತಿಗಳನ್ನು, ಚಿಕಿತ್ಸೆ ಮತ್ತು ಉಪನ್ಯಾಸವನ್ನು ಜಪಾನಿನೆಲ್ಲೆಡೆ ನೀಡಿದ್ದೇನೆ. ಈ ವರ್ಷದಿಂದ ಎರಡು ಬಾರಿ ಜಪಾನಿಗೆ ಭೇಟಿ ನೀಡುತ್ತಿದ್ದೇನೆ. 2009ರಿಂದ ಜಪಾನ್ ಯೋಗನಿಕೇತನ್ ಸಂಸ್ಥೆಯ ಮೂಲಕ ಯೋಗ ಮತ್ತು ಆಯುರ್ವೇದ ಚಿಕಿತ್ಸೆಯನ್ನು ಹಾಗೂ ಸರ್ಟಿಫಿಕೇಟ್ ಕೋರ್ಸ್‌ನ್ನು ಕೂಡಾ ನಡೆಸುತ್ತಾ ಬಂದಿದ್ದೇನೆ.

**ಅಭಿಮತ :** *ಇತೀಚಿನ ವರ್ಷಗಳಲ್ಲಿ ಭಾರತ ಸರ್ಕಾರ ಕೂಡ ಆಯುಷ್ ಹೆಸರಿನ ಪ್ರತ್ಯೇಕ ಮಂತ್ರಾಲಯ ರಚಿಸಿ ಆಯುರ್ವೇದ ಮತ್ತು ಇನ್ನಿತರ ಭಾರತೀಯ ಚಿಕಿತ್ಸಾ ಜ್ಞಾನ ಪದ್ಧತಿಗಳನ್ನು ಪ್ರೋತ್ಸಾಹಿಸುತ್ತಿದೆ. ಸರ್ಕಾರದ ಈ ಕ್ರಮಗಳು ಜನರನ್ನು ತಲುಪುವಲ್ಲಿ ಪರಿಣಾಮಕಾರಿಯಾಗುತ್ತಿವೆಯೇ?*

**ಡಾ. ಭೀಮ ಭಟ್ :** ಭಾರತೀಯ ವೈದ್ಯ ಪದ್ಧತಿಯನ್ನು ಅನುಸರಿಸಿರುವ ನಮ್ಮಂತವರಿಗೆಲ್ಲಾ ಆಯುಷ್ ಮಂತ್ರಾಲಯ ಆಗಿರುವುದರಿಂದ ಸಾಕಷ್ಟು ಉತ್ತೇಜನ ದೊರೆತಿದೆ. ದೇಶದ ಒಳಗೆ ಮಾತ್ರವಲ್ಲ, ಅಂತರರಾಷ್ಟ್ರ ಮಟ್ಟದಲ್ಲಿ ಮುಖ್ಯವಾಗಿ ವಿಶ್ವ ಆರೋಗ್ಯ ಸಂಸ್ಥೆಯುಲ್ಲಿ ಕೂಡಾ ಆಯುರ್ವೇದದ ಬಗೆಗೆ ಅರಿವು ಮೂಡಿಸುವ ಕಾರ್ಯಕ್ರಮಗಳು ಗಣನೀಯವಾಗಿ ಹೆಚ್ಚುತ್ತಾ ಬಂದಿವೆ. ನನ್ನ ಅಭಿಪ್ರಾಯ ಏನೆಂದರೆ, ಸರ್ಕಾರ ಆಯುರ್ವೇದ ಚಿಕಿತ್ಸೆಯನ್ನು ಪರಿಣಾಮಕಾರಿಯಾಗಿ ಬೋಧಿಸಲು ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಬೇಕು. ಅಂದರೆ ಮಾನವ ಸಂಪನ್ಮೂಲವನ್ನು ನೇಮಿಸಿಕೊಳ್ಳಬೇಕು. ಕಾಲೇಜು ಮತ್ತು ವಿಶ್ವ ವಿದ್ಯಾಲಯಗಳಲ್ಲಿ ಬೋಧನೆಯ ಗುಣಮಟ್ಟವನ್ನು ಉತಮಪಡಿಸುವ ಮೂಲಕ ಆಯುರ್ವೇದದ ಬಗೆಗೆ ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಮೂಡಿಸುವ ಕೆಲಸ ತುರ್ತು ಆಗಬೇಕಾಗಿದೆ. ಆಗ ಮಾತ್ರ ಆಯುರ್ವೇದವನ್ನು ಜನರ ಬಳಿಗೆ ತೆಗೆದುಕೊಂಡು ಹೋಗಿ ಅವರಲ್ಲಿ ಅದರ ಬಗ್ಗೆ ವಿಶ್ವಾಸ ಮೂಡಿಸಲು ಸಾಧ್ಯ.

**ಅಭಿಮತ :** *ದೆಹಲಿ ಕನ್ನಡಿಗರಿಗೆ ಬಹಳ ಸಂತೋಷದ ಸುದ್ದಿ ಎಂದರೆ ನೀವು ಪ್ರಾರಂಭಿಸಿರುವ ಆರೋಗ್ಯಮಾಲೆ ಎಂಬ ಆಯುರ್ವೇದ ಕುರಿತ ಉಪನ್ಯಾಸ ಕಾರ್ಯಕ್ರಮ. ಇದನ್ನು ಪ್ರಾರಂಭಿಸುವ ಕುರಿತು ನೀವು ಯಾವಾಗ ಯೋಚನೆ ಮಾಡಿದಿರಿ? ಇದಕ್ಕೆ ದೆಹಲಿ ಕರ್ನಾಟಕ ಸಂಘ ನಿಮ್ಮ ಜೊತೆ ಹೇಗೆ ಸ್ಪಂದಿಸಿತು?*

**ಡಾ. ಭೀಮ ಭಟ್ :** ಆಯುರ್ವೇದದಲ್ಲಿ ನಾನು ಗಳಿಸಿರುವ ಜ್ಞಾನವನ್ನು ದೇಶ ವಿದೇಶಗಳಲ್ಲಿ ಹಂಚಿಕೊಂಡಿದ್ದೇನೆ. ಆದರೆ ನನ್ನ ತಾಯ್ನಾಡಿನಿಂದ ಬಂದು ಹೊರನಾಡ ಕನ್ನಡಿಗರಾಗಿ ಇಲ್ಲಿ ನೆಲೆಗೊಂಡಿರುವ ಕರ್ನಾಟಕದ ಎಲ್ಲರಿಗೂ ಸುಲಭವಾಗಿ, ಉಚಿತವಾಗಿ ಆಯುರ್ವೇದದ ಬಗೆಗೆ ತಿಳಿಸಿಕೊಡಬೇಕೆಂಬ ಭಾವನೆ ದೆಹಲಿಗೆ ಬಂದಾಗಿನಿಂದಲೂ ಇತ್ತು. ಈ ಬಗ್ಗೆ ಅಭಿಮತದಲ್ಲಿ ಲೇಖನ ರೂಪದಲ್ಲಿ ಬರೆದಿದ್ದರೂ ಕೂಡಾ ನೇರವಾಗಿ ಉಪನ್ಯಾಸ ಮಾಡುವುದರಿಂದ ಜನರಿಗೆ ತಮ್ಮ ಆರೋಗ್ಯದ ಸಮಸ್ಯೆಗಳನ್ನು ವದ್ಯರ ಜೊತೆ ಹಂಚಿಕೊಳ್ಳಲು ಅನುಕೂಲವಾಗುತ್ತದೆ. ಆ ಮೂಲಕ ಅವರ ಮನಸ್ಸಿನಲ್ಲಿರುವ ಸಂದೇಹಗಳನ್ನು / ಪ್ರಶ್ನೆಗಳನ್ನು ನಿವಾರಿಸಬಹುದು. ಇದಕ್ಕಿಂತಲೂ ಮುಖ್ಯವಾಗಿ ದೆಹಲಿಯಲ್ಲಿ ಇರುವ ಕನ್ನಡಿಗರು ತಾವು ಅನಗತ್ಯವಾಗಿ ಆರ್ಥಿಕ ಹೊರೆಯನ್ನು ಅನುಭವಿಸಬಾರದು. ಮುಖ್ಯವಾಗಿ ಮಹಿಳೆಯರಿಗೆ, ಮಕ್ಕಳಿಗೆ ತಮ್ಮ ಸಮಸ್ಯೆಗಳನ್ನು ಕನ್ನಡೇತರ ವೈದ್ಯರಿಗೆ ಅರ್ಥ ಮಾಡಿಸುವಾಗ ಉಂಟಾಗುವ ಗೊಂದಲವನ್ನು ನಿವಾರಿಸಿ ಅವರ ಆರೋಗ್ಯ ಉತ್ತಮಪಡಿಸಲು ನನ್ನ ಕೈಲಾದ ಸರಳ, ಸುರಕ್ಷಿತ ಹಾಗೂ ಸುಲಭ ಉಪಾಯಗಳನ್ನು ಆಯುರ್ವೇದದ ಮೂಲಕ ದೊರಕಿಸಿಕೊಡುವುದು. ಅರ್ಥೈಸಿ ತಮ್ಮ ಮನೆಯಲ್ಲಿಯೇ ಅವರು ಸರಳವಾಗಿ ಪರಿಹಾರ ಕಂಡುಕೊಳ್ಳಲು ನೆರವಾಗುವಉದ್ದೇಶದಿಂದ ಈ ಉಪನ್ಯಾಸ ಮಾಲೆಯನ್ನು ಪ್ರಾರಂಭಿಸಿದ್ದೇನೆ.

ನನ್ನ ಈ ಭಾವನೆಯನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳೊಂದಿಗೆ ಹಂಚಿಕೊಂಡಾಗ ಅವರು ತುಂಬಾ ಸಂತೋಷದಿಂದ ಆಹ್ವಾನಿಸಿದರು. ಈ ನಮ್ಮ ಪ್ರಯತ್ನ ದೆಹಲಿ ಕನ್ನಡಿಗರಿಗೆ ತಲುಪಬೇಕು. ನನ್ನ ಮೊದಲ ದಿನದ ಉಪನ್ಯಾಸದಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ ಇತ್ತು. ಮನೆ ಮಂದಿಯ ಆರೋಗ್ಯ ಪಾಲನೆಯಲ್ಲಿ ಮಹಿಳೆಯರ ಪಾತ್ರ ಬಹಳ ಮುಖ್ಯ. ಯಾವರೀತಿ ಅಡುಗೆ ಮಾಡಿದರೆ ಮನೆ ಮಂದಿಯ ಆರೋಗ್ಯದ ಮುತುವರ್ಜಿ ವಹಿಸುವುದಕ್ಕೆ ಸಾಧ್ಯ ಎಂದು ಅವರಿಗೆ ತಿಳಿದಿರಬೇಕಾದುದು ಬಹಳ ಮುಖ್ಯ. ಆಗ ಮಾತ್ರ ಕುಟುಂಬದಲ್ಲಿ ಆರೋಗ್ಯ ನೆಲೆಗೊಂಡು ಆ ಮೂಲಕ ಉಳಿದ ಕ್ಷೇತ್ರಗಳಲೂ ಪ್ರಗತಿ ಕಾಣಲು ಸಾಧ್ಯ. ಆಗಾಗಿ ಮಹಿಳೆಯರು ಸೇರಿದಂತೆ ಎಲ್ಲರಿಗೂ ನನ್ನ ಉಪನ್ಯಾಸದ ಪ್ರಯೋಜನ ದೊರೆಯಬೇಕು ಎಂದು ನನ್ನ ಅಪೇಕ್ಷೆ. ಹಾಗಾದಾಗ ಮಾತ್ರ ನನ್ನ ಶ್ರಮ ಸಾರ್ಥಕಎಂದು ಭಾವಿಸುತ್ತೇನೆ.

**ಅಭಿಮತ :** *ದೆಹಲಿ ಕರ್ನಾಟಕ ಸಂಘದಲ್ಲಿ ನೀವು ನೀಡುತ್ತಿರುವ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಬಹಳಷ್ಟು ದೆಹಲಿ ಕನ್ನಡಿಗರ ಹಾಗೂ ಕನ್ನಡೇತರರಿಂದ ಪ್ರಶಂಸೆ ಪಡೆದಿದೆ. ಎಷ್ಟು ವರ್ಷಗಳಿಂದ ಈ ಉಚಿತ ವೈದ್ಯಕೀಯ ಸಲಹೆ ನೀಡುತ್ತಾ ಬಂದಿರುತ್ತೀರಿ. ಅಂದಾಜು ಎಷ್ಟು ಜನರಿಗೆ ನೀವು ಉಚಿತ ಸಲಹೆ ನೀಡಿದೀರಿ?*

**ಡಾ. ಭೀಮ ಭಟ್:** 1982 ರಿಂದ ಪ್ರತೀ ತಿಂಗಳ ಕೊನೆಯ ಭಾನುವಾರ ನಾನು ದೆಹಲಿ ಕರ್ನಾಟಕ ಸಂಘದಲ್ಲಿ ಉಚಿತ ವೈದ್ಯಕೀಯ ಸಲಹೆಯನ್ನು ನೀಡುತ್ತಾ ಬಂದಿದ್ದೇನೆ. ನಿಖರ ಸಂಖ್ಯೆ ನನಗೆ ನೆನಪಿಲ್ಲ. ಆದರೂ ಸಾವಿರಾರು ಜನ ಕನ್ನಡಿಗರಿಗೆ ಇದರ ಸದುಪಯೋಗ ಆಗಿರುವುದಂತೂ ಸತ್ಯ. ಇದು ನನಗೆ ತೃಪ್ತಿ ತಂದುಕೊಟ್ಟಿದೆ.

**ಅಭಿಮತ :** *ಒಂದು ಕಡೆ ನಿಮ್ಮ ಜನಮನ್ನಣೆಗೆ ಪಾತ್ರವಾಗಿರುವ ವೈದ್ಯಕ್ಯೀಯ ಸಲಹೆ, ಚಿಕಿತ್ಸೆಗಳು ಆಯುರ್ವೇದ ಚಿಕಿತ್ಸೆಯ ಬಗ್ಗೆ ಜನರನ್ನು ಹತ್ತಿರ ಸೆಳೆಯುತ್ತಿರುವ ನೀವು ನಿಮ್ಮ ಕಿರಿಯ ಸಮಕಾಲೀನ ಆಯುರ್ವೇದ ವೈದ್ಯರಿಗೆ ನಿಮ್ಮ ಸಲಹೆ ಮತ್ತು ಸಂದೇಶ ಏನು? ಯಾವುದೇ ಒಂದು ಜ್ಞಾನ ಶಿಸ್ತು ಬೆಳೆಯಬೇಕಾದರೆ ಅದನ್ನು ಕೈಗೆತ್ತಿಕೊಳ್ಳುವವರಲ್ಲಿ ಮುಖ್ಯವಾಗಿ ಇರಬೇಕಾದುದು ಆತ್ಮವಿಶ್ವಾಸ ಆದರೆ ಭಾರತದ ಜ್ಞಾನ ಪರಂಪರೆಯಲ್ಲಿ ಹೆಮ್ಮೆಯ ಸ್ಥಾನ ಹೊಂದಿದ್ದ ಆಯುರ್ವೇದ ಇವತ್ತು ಆತ್ಮವಿಶ್ವಾಸ ಕೊರತೆಯನ್ನು ಎದುರಿಸುತ್ತಿದೆ ಎಂಬ ಮಾತು ವಿದ್ವತ್ ವಲಯದಲ್ಲಿದೆ. ಹಾಗಾಗಿ ಆಯುರ್ವೇದದ ಕುರಿತು ವೈದ್ಯರು ಹಾಗೂ ಜನಸಾಮಾನ್ಯರು ಇಬ್ಬರಲ್ಲೂ ಮೂಡಿಸಬೇಕಾದ ಆತ್ಮವಿಶ್ವಾಸ ಕುರಿತು ನೀವು ಏನು ಹೇಳುತ್ತೀರಿ?*

**ಡಾ. ಭೀಮ ಭಟ್ :** ಮೊದಲನೆಯದಾಗಿ ನಾನು ಹೇಳುವುದೇನೆಂದರೆ ಆಯುರ್ವೇದವನ್ನು ಆಯ್ಕೆ ಮಾಡಿಕೊಂಡಿರುವ ವೈದ್ಯರು ಆಯುರ್ವೆದವನ್ನೇ ಕಡ್ಡಾಯವಾಗಿ ಪ್ರಾಕ್ಟೀಸ್ ಮಾಡುವ ಮೂಲಕ ತಮ್ಮ ವೃತ್ತಿಗೆ ನ್ಯಾಯ ದೊರಕಿಸಿಕೊಡಬೇಕು. ಅದು ಸಾಧ್ಯವಾಗಬೇಕಾದರೆ ಅವರು ಆಳವಾಗಿ ಅಧ್ಯಯನ ಮಾಡಬೇಕು, ಆಗ ಅವರಲ್ಲಿ ಆತ್ಮವಿಶ್ವಾಸ ಮೂಡುತ್ತದೆ. ಆನಂತರವಷ್ಟೇ ಅವರು ತಮ್ಮ ಬಳಿ ವೈದ್ಯಕೀಯ ಸಲಹೆಗಾಗಿ ಬರುವ ಜನರಿಗೆ ಆಯುರ್ವೇದದ ಬಗೆಗೆ ಆತ್ಮವಿಶ್ವಾಸ ಮೂಡಿಸಲು ಸಾಧ್ಯ. ಇಲ್ಲದಿದ್ದರೆ ಅವರು ಸ್ವತಃ ಆತ್ಮ ವಿಶ್ವಾಸದ ಕೊರತೆ ಎದುರಿಸಬೇಕಾಗುತ್ತದೆ, ಅಲ್ಲದೆ ಜನರಲ್ಲಿ ಆತ್ಮವಿಶ್ವಾಸ ಮೂಡಿಸಲು ಕೂಡ ಅವರಿಗೆ ಸಾಧ್ಯವಾಗುವುದಿಲ್ಲ. ಇಂದು ಆಗುತ್ತಿರುವುದು ಇದೇ ಆಗಿದೆ. ಆಯುರ್ವೇದ ವೈದ್ಯರು ಅಲೋಪತಿಯ ಜ್ಞಾನ ತಕ್ಕಮಟ್ಟಿಗೆ ಹೊಂದಿರಬೇಕು, ಆದರೆ ಆಯುರ್ವೇದದ ಚಿಕಿತ್ಸೆಯನ್ನು ಮಾತ್ರ ಜನರಿಗೆ ನೀಡಬೇಕು. ಯಾವುದೇ ಕಾರಣಕ್ಕೂ ಅಲೋಪತಿ ಔಷಧಗಳನ್ನು ನೀಡಬಾರದು.

ಹಾಗಾಗಿ ಮೊದಲು ಆಯುರ್ವೇದವನ್ನು ಆಯ್ಕೆ ಮಾಡಿಕೊಳ್ಳುವ ಎಲ್ಲರಿಗೂ ನನ್ನ ಕಿವಿಮಾತೆಂದರೆ ಆಯುರ್ವೇದ ಭಾರತೀಯ ಸಂಸ್ಕೃತಿ, ಪರಂಪರೆಯ ಒಂದು ಅಂಗ. ನಾವು ನಮ್ಮ ಸಂಸ್ಕೃತಿ, ನಮ್ಮ ಪರಂಪರೆಯನ್ನು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಅನುಸರಿಸೋಣ. ಏಕೆಂದರೆ ಹೊರ ದೇಶಗಳ ಜನ ಆಯುರ್ವೇದದ ಬಗೆಗೆ ಹೆಚ್ಚು ಉತಾಹ ತೋರುತ್ತಿದ್ದಾರೆ. ವಿಪರ್ಯಾಸವೆಂದರೆ ನಮ್ಮ ದೇಶದಲ್ಲಿಯೇ ಜನರಿಗೆ ಇದರ ಬಗ್ಗೆ ನಿರ್ಲಕ್ಷ್ಯ ಭಾವನೆ ಇನೂ ಇದೆ. ಇದಾಗಬಾರದು. ಇಂತಹ ನಿರ್ಲಕ್ಷ್ಯವನ್ನು ತೊಡೆದು ಹಾಕುವ ಗುರುತರ ಜವಾಬ್ದಾರಿ ಆಯುರ್ವೇದ ವೈದ್ಯರು ಮತ್ತು ಭಾರತ ಸರ್ಕಾರದ ಆಯುಷ್ ಮಂತ್ರಾಲಯದ ಮೇಲಿದೆ. ಅ



# ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ
# ಶ್ರೀ ಟಿ.ಪಿ. ಅಶೋಕ್ ಅವರಿಗೆ ಸಂಘದಲ್ಲಿ ಅಭಿನಂದನೆ

ಈ ಬಾರಿಯ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕನ್ನಡದ ಹಿರಿಯ ವಿದ್ವಾಂಸ, ವಿಮರ್ಶಕ ಶ್ರೀ ಟಿ.ಪಿ. ಅಶೋಕ್ ಅವರಿಗೆ ದೆಹಲಿ ಕರ್ನಾಟಕ ಸಂಘದ ವತಿಯಿಂದ ಫೆಬ್ರವರಿ 18ರಂದು ಅಭಿನಂದನೆಯನ್ನು ಮಾಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ವಹಿಸಿದ್ದರು.

ಶ್ರೀ ಟಿ.ಪಿ. ಅಶೋಕ್ ಅವರು ಮಾತನಾಡುತ್ತ ನಾವು ಮೇಲ್ನೋಟಕ್ಕೆ ಭಾಷೆ ಅಥವಾ ಜಾತಿ, ಧರ್ಮ, ಸಂಸ್ಕೃತಿ ಅನ್ನುವ ಹೆಸರಿನಲ್ಲಿ ಒಡೆದು ಕೊಂಡಿದ್ದೇವೆ ಅಥವಾ ಪ್ರತ್ಯೇಕ ಪ್ರತ್ಯೇಕಗೊಂಡಿದ್ದೇವೆ ಅನ್ನುವಂತೆ ಮೇಲ್ನೋಟಕ್ಕೆ ಅನಿಸುತ್ತಾ ಇದ್ದರೂ ಕೂಡಾ ನಮ್ಮ ಮೈಗಳಲ್ಲಿ ಹರಿಯುತ್ತಾ ಇರುವುದು ಮನುಷ್ಯ ರಕ್ತ, ನಮ್ಮ ದೇಹದಲ್ಲಿ ಸಂಚಾರ ಮಾಡುತ್ತಾ ಇರುವುದು ಹ್ಯೂಮನ್ ಸ್ಪಿರಿಟ್. ಈ ಹ್ಯೂಮನ್ ಸ್ಪಿರಿಟ್‌ಗೆ ಜಾತಿ, ಅಂತಸ್ತು ಇವುಗಳ ಬೇಧ ಇರುವುದಿಲ್ಲ ಎಂದರು. ಮೇಲ್ನೋಟಕ್ಕೆ ಪ್ರತ್ಯೇಕ ಪ್ರತ್ಯೇಕ ಅಂತ ಕಾಣ್ತಾ ಇರೋದು ನಮಗೆ ನಿಜವಾದ ವೈವಿಧ್ಯಮಯ ಅಂತ ಕಾಣ್ತಾ ಇದೆ. ಅದು ನಮಗೊಂದು ಬಹುತ್ವ ಅಂತ ಅನ್ನಿಸಬೇಕು. ಈ ಬಹುತ್ವದ ಕಲೋಪಕರಗಳ ಒಳಗೆ ಇರುವುದು ಅಪ್ಪಟ ಮನುಷ್ಯ. ಅಪ್ಪಟ ಮನುಷ್ಯನನ್ನು ಸ್ಪರ್ಶಿಸುವುದಕ್ಕೆ ಬೇಕಾದಂತಹ ಅದ್ಭುತವಾದ ಸಾಹಿತ್ಯವನ್ನು ಇಡೀ ವಿಶ್ವದ ಲೇಖಕರು ನಮಗೆ ಕೊಟ್ಟಿದ್ದಾರೆ. ಅವೆಲ್ಲವನ್ನು ಕನ್ನಡ ಭಾಷೆಯಲ್ಲೆ ಓದಿ, ನಾವು ಅದನ್ನು ಆಸ್ವಾದಿಸುವ ಒಂದು ಕೆಲಸ ಆಗಬೇಕಾಗಿದೆ ಎಂದರು. ಅವರು ಪ್ರಶಸ್ತಿ ವಿಜೇತ 'ಕೃತಿ ಜಗತ್ತು' ಪುಸ್ತಕದಲ್ಲಿ ಭಾರತದ ಗಡಿಗಳನ್ನು ದಾಟಿ, ವಿಶ್ವ ಸಾಹಿತ್ಯವನ್ನು ಕುರಿತ 26 ಲೇಖನಗಳನ್ನು ಪ್ರಕಟಗೊಂಡು ಅವು ವಿಶ್ವ ಸಾಹಿತ್ಯವನ್ನು ಅರ್ಥೈಸುವ ಕೆಲಸವನ್ನು ಮಾಡುತ್ತಿದೆ ಎಂದರು.

ಕನ್ನಡ ಲೇಖಕರನ್ನು ಇತರ ಭಾಷೆಯ ಬಹುದೊಡ್ಡ ಲೇಖಕರ ಜೊತೆಗಿಟ್ಟು ನೋಡಿದಾಗ, ನಮ್ಮ ಲೇಖಕರ ಸಿದ್ಧಿ ಮತ್ತು ಸಾಧನೆಗಳು ಕೂಡಾ ಹೊಸ ಬೆಳಕಿನಲ್ಲಿ ಗೋಚರವಾಗುತ್ತದೆ. ರವೀಂದ್ರನಾಥ ಟ್ಯಾಗೋರ್ ಜೊತೆಗೆ ಶಿವರಾಮ ಕಾರಂತರು ಚಂದ್ರಶೇಖರ ಕಂಬಾರರನ್ನು ಓದಬೇಕಾಗುತ್ತದೆ ಅಥವಾ ಮಹಾಶ್ವೇತಾದೇವಿ, ಕಮಲಾದಾಸ್ ಅವರಂತಹ ದೊಡ್ಡ ಲೇಖಕರೊಂದಿಗೆ ನಮ್ಮ ವೈದೇಹಿ, ಸಾ.ರಾ. ಅಬೂಬಕ್ಕರ್ ಅವರನ್ನು ನೋಡಿದಾಗ ನಮಗೆ ಈ ಲೇಖಕಿಯರು ಕೂಡಾ ಇಲ್ಲಿ ಹೆಚ್ಚು ಅರ್ಥ ಆಗುತ್ತಾರೆ. ಹಾಗಾಗಿ ನಾನು ಈ ಎಲ್ಲಾ ಲೇಖಕರನ್ನು ಕುರಿತು ಆ ಭಾಷೆಯ ಸಾಹಿತ್ಯ ಕನ್ನಡದ ಅನುವಾದಗಳಲ್ಲೇ ಓದಿಕೊಂಡು ಈ ಪುಸ್ತಕಗಳನ್ನು ಬರೆದಿದ್ದೇನೆ.




ನಮಗೆ ಇಂಗ್ಲಿಷ್ ಒಂದೇ ಒಂದು ಅಕ್ಷರ ಬರದೆ, ಷೇಕ್ಸ್‌ಪಿಯರ್‌ನ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲೇ ಓದಿ ಅನುಭವಿಸುವಷ್ಟು ವಿಫಲವಾದ ಸಾಮಗ್ರಿ ಕನ್ನಡದಲ್ಲಿ ಇದೆ. ಕಳೆದ 4 ದಶಕಗಳಿಂದ ಕನ್ನಡ, ಕನ್ನಡೇತರ ಮತ್ತು ಭಾರತೀಯೇತರ ಭಾಷೆಗಳ ಸಾಹಿತ್ಯಕ್ಕೆ ಪ್ರತಿಸ್ಪಂದಿಸುತ್ತಾ ಬಂದಿರುವುದಕ್ಕೆ ಈಗ ಕೆಲಸ

ಸಾಕಷ್ಟು ಯಶಸ್ವಿಯಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನನ್ನ 'ಕಥನ ಭಾರತಿ' ಪುಸ್ತಕಕ್ಕೆ ಲಭಿಸಿದೆ. ಇದು ಕೇವಲ ನನ್ನ ಸಂತೋಷ ಅಲ್ಲ, ಅದು ನಿಮಗೆಲ್ಲರಿಗೂ ಆದ ಸಂತೋಷ, ಇಂದು ದೆಹಲಿ ಕರ್ನಾಟಕ ಸಂಘದ ಗೌರವಿಸಿರುವುದು ಬಹಳ ದೊಡ್ಡ ಗೌರವ ಎಂದರು.

ನಾನು 1979ರಿಂದ ಬರವಣಿಗೆಯನ್ನು ಆರಂಭಿಸಿದೆ. 1979ರಲ್ಲಿ ನನ್ನ ಮೊದಲ ವಿಮರ್ಶಾ ಸಂಕಲನ 'ನವ್ಯ ಕಾದಂಬರಿಯ ಪ್ರೇರಣೆಗಳು' ಪ್ರಕಟವಾಯಿತು. ಅಲ್ಲಿಂದ ಇಲ್ಲಿಯವರೆಗೆ ಸುಮಾರು 30 ಪುಸ್ತಕಗಳನ್ನು ಬರೆದಿದ್ದೇನೆ. ಆ ಪುಸಕಗಳಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ 'ಕಥನ ಭಾರತಿ' ಪುಸ್ತಕ ವಿಶಿಷ್ಟವಾದುದು. ಯಾಕೆಂದರೆ ನಾನು ಕನ್ನಡ ಸಾಹಿತ್ಯದ ಗಡಿಗಳನ್ನು ದಾಟಿ, ಭಾರತದ ಸಾಹಿತ್ಯವನ್ನು ಅಲ್ಲಿ ಪ್ರಶ್ನೆ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೇನೆ. ಈ ಕಥನ ಭಾರತಿ ಕೃತಿಯಲ್ಲಿ 20 ವಿಮರ್ಶಾತ್ಮಕವಾದ ಲೇಖನಗಳಿವೆ. ಇಲ್ಲಿ ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಕುವೆಂಪು, ಡಾ. ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ, ಡಾ. ಚಂದ್ರಶೇಖರ ಕಂಬಾರ್, ವೈದೇಹಿ ಇವರ ಕೃತಿಗಳ ಜೊತೆಗೆ ನಾನು ಆಧುನಿಕ ಭಾರತದ ಗಣ್ಯ ಲೇಖಕರಾದ ರವೀಂದ್ರನಾಥ್ ಟ್ಯಾಗೋರ್, ಮಹಾಶ್ವೇತಾದೇವಿ, ಮಹಾತ್ಮ ಗಾಂಧಿ, ಡಾ. ಅಂಬೇಡ್ಕರ್, ಕಮಲದಾಸ್, ಗೋಪಿನಾಥ್ ಮೊಹಂತಿ ಹೀಗೆ 20ನೇ ಶತಮಾನದ ಮುಖ್ಯ ಭಾರತೀಯ ಲೇಖಕರನ್ನೂ ಕೂಡಾ ಚರ್ಚೆ ಮಾಡುವುದಕ್ಕೆ ಪ್ರಯತ್ನಪಟ್ಟಿದ್ದೇನೆ. ಕಳೆದ 4 ದಶಕಗಳಿಂದ ಭಾರತೀಯ ಸಾಹಿತ್ಯವನ್ನು ಕನ್ನಡ ಅನುವಾದದಲ್ಲೇ ಓದಿಕೊಂಡು ಬಂದ ನನಗೆ ಬಹಳ ಆಶ್ಚರ್ಯ ಅನಿಸಿದ್ದು, ಈ ಕನ್ನಡ ಭಾಷೆಯ ಜೊತೆಗೆ ಇನ್ನೂ ಅನೇಕ ಭಾಷೆಗಳಲ್ಲಿ ಭಾರತೀಯ ಸಾಹಿತ್ಯ ಏನು ರಚಿತ ಆಗಿದೆ, ಅದು ಎಷ್ಟು ಸಮೃದ್ಧವಾಗಿದೆ ಮತ್ತು ಸಾಹಿತ್ಯಗಳ ನಡುವಣ ಸಾದೃಶ ಮತ್ತು ಸಾಮ್ಯ ಅಚ್ಚರಿ ಹುಟ್ಟಿಸುವಂತಾಗಿದೆ.

ನೆಹರು ಅವರು ಸಾಹಿತ್ಯ ಅಕಾಡೆಮಿಯನ್ನು ಪ್ರಾರಂಭಿಸಿದಾಗ, ಒಂದು ಮಾತನ್ನು ಹೇಳುತ್ತಾರೆ – 'ಭಾರತೀಯ ಸಾಹಿತ್ಯ ಅನ್ನುವುದು ಹಲವು ಭಾಷೆಗಳಲ್ಲಿ ಬರೆಯುವ ಒಂದೇ ಸಾಹಿತ್ಯ' ಎಂದು. ಅದನ್ನು ನಾನು ನನ್ನ ಕಳೆದ ನಾಲ್ಕು ದಶಕಗಳ ಅಧ್ಯಯನದಲ್ಲಿ ಕಂಡುಕೊಂಡಿದ್ದೇನೆ. ಯಾಕೆಂದರೆ ಭಾರತೀಯ ಲೇಖಕರು ಬಂಗಾಳ, ಮಲಯಾಳಂ, ಗುಜರಾತ್, ಉರ್ದು ಈ ಎಲ್ಲಾ ಭಾಷೆಯ ಲೇಖಕರು ಮುಖ್ಯವಾಗಿ ಆಧುನಿಕ ಲೇಖಕರು ಕಳೆದ 200 ವರ್ಷಗಳಲ್ಲಿ ಈ ಭೌಗೋಳಿಕ ಪ್ರದೇಶ ವಸಹಾತುಶಾಹಿಯ ಆಗಮನ, ಆಧುನಿಕತೆಯ ಪ್ರದೇಶ, ಸ್ವಾತಂತ್ರ್ಯ ಚಳುವಳಿಗಳು, ವಿಭಜನೆಯ ದುರಂತ ಮುಂತಾದ ಏನೆಲ್ಲಾ ಅನುಭವಗಳಿಗೆ ಎದುರಾಯಿತು ಎನ್ನುವುದನ್ನು ಉಲ್ಲೇಖಿಸುತಾರೆ. ಸ್ವಾತಂತ್ರ್ಯಾ ನಂತರ ಭಾರತದ ಬೇರೆ ಬೇರೆ ಕಡೆ ಬೇರೆ ಬೇರೆ ರೀತಿಯ ಅಭಿವೃದ್ಧಿ ಕೆಲಸಗಳು ನಡೆಯುತ್ತಾ ಇದೆ. ಈ ಅಭಿವೃದ್ಧಿಯ ರಾಜಕಾರಣ ಹೊಸ ಕಥನಗಳನ್ನು ಸೃಷ್ಟಿ ಮಾಡುತ್ತಿದೆ. ಈಚೆಗೆ ಬೆಳೆಯುತ್ತಿರುವ ಕೋಮುವಾದ ಹೀಗೆ ಅನೇಕ ಸಮಾನವಾದ ಅನುಭವಗಳು ಇವೆ. ಈ ಅನುಭವಗಳಿಗೆ ನಮ್ಮೆಲ್ಲಾ ಲೇಖಕರು ಪ್ರತಿಕ್ರಿಯಿಸಿ, ಪ್ರತಿಸ್ಪಂದಿಸಿ ಅವುಗಳನ್ನು ಅರ್ಥೈಸಿ, ಅರ್ಥಮಾಡಿಕೊಳ್ಳುವ ರೀತಿ ಅದು ನಮಗೆಲ್ಲಾ ಲಾಭದಾಯಕವಾದದ್ದು. ಅಂದರೆ ನನಗೆ ಕನ್ನಡ ಭಾಷೆಯಲ್ಲಿ ಏನು ಅನುಭವ ದೊರೆಯುತ್ತಾ ಇರುತ್ತದೆ, ಅದೇ ರೀತಿಯ ಅನುಭವಗಳು ಗುಜರಾತ್, ಅಸ್ಸಾಂ, ಬಂಗಾಳ ಭಾಷೆಯಲ್ಲೂ ಆಗುತ್ತಾ ಇದೆ. ಈ ಎಲ್ಲಾ ಲೇಖಕರು ಇವುಗಳನ್ನು ಹೇಗೆ ತಮ್ಮ ಕೃತಿಗಳಲ್ಲಿ ಅಳವಡಿಸಿದ್ದಾರೆ ಅನ್ನುವ ಒಂದು ಅನುಭವ ದೊರೆಯುತ್ತದೆ ಎಂದು ಅಶೋಕ ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತಾ, ಟಿ.ಪಿ. ಅಶೋಕ ಅವರು ನನಗೆ ಸಾಹಿತ್ಯ ಲೋಕ. ಇಂದು ಕನ್ನಡಿಗರಿಗೆ ಸಂತೋಷದ ಮತ್ತು ಸಂಭ್ರಮದ ದಿನ. ಒಂದು ಕಡೆ ಎಂದೋ ಸಿಗಬೇಕಾಗಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಈಗ ಟಿ.ಪಿ. ಅಶೋಕ ಅವರಿಗೆ ಲಭಿಸಿದೆ. ಇನ್ನೊಂದು ಕಡೆ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಡಾ. ಚಂದ್ರಶೇಖರ ಕಂಬಾರ ಅವರು ಈಗಾಗಲೇ ಅಧಿಕಾರ ವಹಿಸಿಕೊಂಡಿದ್ದಾರೆ. ಇಷ್ಟು ಮಾತ್ರ ಅಲ್ಲ, ಕೇಂದ್ರ ಲಲಿತ ಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಶ್ರೀ ಕೃಷ್ಣ ಸೆಟ್ಟಿಯವರು ತುಂಬಾ ಅದ್ಭುತವಾಗಿ ಕರ್ನಾಟಕವನ್ನು ಸಂಪೂರ್ಣವಾಗಿ ಪ್ರತಿನಿಧಿಸುತ್ತಾ, ದೇಶ–ವಿದೇಶಕ್ಕೆ ಅದನ್ನು ತೋರಿಸಿಕೊಡುತ್ತಾ ಮಾದರಿಯಾಗುವ ಕೆಲಸವನ್ನು ಮಾಡುತ್ತಾ ಇದ್ದಾರೆ. ಇದು ನಮಗೆ ಹೆಮ್ಮೆ ಮತ್ತು ಸಂತೋಷದ ಸಮಯ. ಅಂದರೆ ದೆಹಲಿಯಲ್ಲೆ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ಆಡಳಿತ ಮಾಡಲು ಪ್ರಾರಂಭಿಸಿದ್ದೇವೆ. ಮುಂದಿನ ದಿನಗಳಲ್ಲಿ ನ್ಯಾಶನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿಯೂ ನಮ್ಮ ಕನ್ನಡಿಗರು ಬರಲಿ ಎಂದು ಆಶಿಸಿದರು.

ಸಭಾ ಕಾರ್ಯಕ್ರಮದ ನಂತರ ಸಂಸ್ಕೃತಿ ಸೌರಭ ತಂಡ, ಕುಕ್ಕೆಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಕಾರ್ಯಕ್ರಮವನ್ನು ಶ್ರೀಮತಿ ಪೂಜಾ ಪಿ. ರಾವ್ ಅವರು ನಿರೂಪಿಸಿದರು ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದಿಸಿದರು. ಅ

**ಅಭಿಮತ ವರದಿ**

## ಕರ್ನಾಟಕದ ಪರಂಪರೆಯನ್ನು ಪರಿಚಯಿಸುವಲ್ಲಿ ದೆಹಲಿ ಕರ್ನಾಟಕ ಸಂಘದ ಕೊಡುಗೆಯನ್ನು ಮೆಚ್ಚಿದ ನಿವೃತ್ತ ನ್ಯಾಯಾಧೀಶ ಹೆಚ್.ಎನ್. ನಾಗಮೋಹನ್ ದಾಸ



ದೆಹಲಿ ಕರ್ನಾಟಕ ಸಂಘವು ಕನ್ನಡ ಭಾಷೆ, ಕನ್ನಡ ಜಲ, ಕನ್ನಡ ನೆಲ, ಕನ್ನಡ ಸಂಸ್ಕೃತಿ, ಕನ್ನಡ ಜಾನಪದ ಈ ರೀತಿ ಅನೇಕ ಕ್ಷೇತ್ರಗಳಲ್ಲಿ ತನ್ನದೇ ಆದಂತಹ ವಿಶಿಷ್ಟವಾದ ಕಾರ್ಯಕ್ರಮಗಳನ್ನು ರೂಪಿಸಿ ಕೊಡುಗೆಯನ್ನು ನೀಡಿ, ಕರ್ನಾಟಕದ ಪರಂಪರೆಯನ್ನು ಈ ದೇಶದ ಜನರಿಗೆ ಪರಿಚಯ ಮಾಡಿಕೊಡುತ್ತಿರುವಂತಹ ಕೆಲಸದಲ್ಲಿ ತೊಡಗಿದೆ ಎಂದು ಕರ್ನಾಟಕದ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರಾದ ಶ್ರೀ ಹೆಚ್.ಎನ್. ನಾಗಮೋಹನ್ ದಾಸ ಅವರು ಹೇಳಿದರು. ದೆಹಲಿ ಕರ್ನಾಟಕ ಸಂಘದ ವತಿಯಿಂದ ಅವರನ್ನು ಅಭಿನಂದಿಸಲಾಯಿತು.

ಕರ್ನಾಟಕದ ಕನ್ನಡಿಗರು ಈ ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ, ಸಂಸತ್ತಿನಲ್ಲಿ, ಕಾರ್ಯಾಂಗದಲ್ಲಿ ಮಹತ್ತರವಾದ ಕೊಡುಗೆಯನ್ನು ನೀಡಿದ ಮಹನೀಯರನ್ನು ಕನ್ನಡನಾಡು ನೀಡಿದೆ. ಅದರ ಜೊತೆಗೆ ಬೇರೆ ಬೇರೆ ಕ್ಷೇತ್ರಗಳಾದ ಸಾಹಿತ್ಯ ಅಕಾಡೆಮಿ, ಕಲಾ ಅಕಾಡೆಮಿ, ನಾಟಕ ಅಕಾಡೆಮಿ ಮತ್ತು ಪ್ರಸಾರ ಭಾರತಿಯಂತಹ ಕ್ಷೇತ್ರಗಳಲ್ಲಿ ಕನ್ನಡಿಗರು ತನ್ನದೇ ಆದ ಮುಖಂಡತ್ವವನ್ನು ವಹಿಸಿ ಆ ಕ್ಷೇತ್ರಗಳಲ್ಲಿ ಶ್ರೀಮಂತ ಮಾಡಿರತಕ್ಕಂತಹ ನಾಡು ನಮ್ಮ ಕನ್ನಡನಾಡು. ಕರ್ನಾಟಕದಲ್ಲಿ ಜಿಲ್ಲೆ, ತಾಲೂಕು, ಹಳ್ಳಿಗೂ ಒಂದೊಂದು ಜನಪದ ಇದೆ. ಅಂತಹ ಶ್ರೀಮಂತವಾದ ಜನಪದ ಸಾಹಿತ್ಯ, ಸಂಸ್ಕೃತಿ ಇರತಕ್ಕಂತಹ ನಾಡು ಕನ್ನಡನಾಡು ಆ ಬಗ್ಗೆ ನಾವು ಹೆಮ್ಮೆ ಗೌರವ ಪಡೋಣ ಎಂದರು.

ಒಂದು ಹಳ್ಳಿಯಿಂದ ಬಂದಂತಹ ನನಗೆ ನಮಗೆ ಯಾಕೆ ಸಂಗೀತ ಬೇಕು? ಯಾಕೆ ಜನಪದ ಬೇಕು? ಎಂದು ಬಹಳ ಚೆನ್ನಾಗಿ ಗೊತ್ತಿದೆ ಎಂದರು. 'ಹಾಡುತ್ತ, ಕುಣಿಯುತ್ತಾ ಕೆಲಸ ಮಾಡಿದರೆ ದಣಿವಿರುವುದಿಲ್ಲ' ಹಾಗಾಗಿ ಗ್ರಾಮೀಣ ಬದುಕಿನಲ್ಲಿ ಹೆಜ್ಜೆ ಹೆಜ್ಜೆಗೂ ಒಂದು ಜನಪದ ಇದೆ. ಜನಪದ ಅನ್ನುವುದೊಂದು ಮನರಂಜನೆ ಅಲ್ಲ, ಅದೊಂದು ಅನುಭವ, ಅದೊಂದು ಸಂದೇಶ, ಅಭಿವ್ಯಕ್ತಿ, ಜ್ಞಾನ, ಅದೊಂದು ಮೆಡಿಕಲ್ ಥೆರಪಿ ಅನ್ನುವುದು ನಾವು ಮರೆಯಬಾರದು. ಹಾಗಾಗಿ ನಮಗೆ ಹಾಡು, ನೃತ್ಯ, ಜನಪದ ಬೇಕಾಗಿದೆ. ಈ ರೀತಿಯಾಗಿ ದೆಹಲಿ ಕರ್ನಾಟಕ ಸಂಘವು ಅತ್ಯುತ್ತಮವಾದ ಕೆಲಸ ಮಾಡುತ್ತಾ ಇದೆ. ನಾವೆಲ್ಲರೂ ಇವರೊಂದಿಗೆ ಕೈ ಜೋಡಿಸೋಣ, ಅವರನ್ನು ಪ್ರೋತ್ಸಾಹಿಸೋಣ ಎಂದರು. ಅ

**ಅಭಿಮತ ವರದಿ**

## ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದಲ್ಲಿ ಭಕ್ತಿ ಕುರಿತು ವಿಶೇಷ ಉಪನ್ಯಾಸ



ಕನ್ನಡದ ಪ್ರಖ್ಯಾತ ವಿಮರ್ಶಕರೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರೂ ಆಗಿರುವ ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ ಅವರು ಫೆಬ್ರವರಿ 15ರಂದು ಕನ್ನಡ ಅಧ್ಯಯನ ಪೀಠದ ಆಶ್ರಯದಲ್ಲಿ ಜೆ.ಎನ್.ಯು.ವಿನಲ್ಲಿ ಕನ್ನಡ ವಚನ ಸಾಹಿತ್ಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಖ್ಯಾತ ಕವಿಗಳಾದ ಪ್ರೊ. ಎಚ್.ಎಸ್. ಶಿವಪ್ರಕಾಶ್ ಅವರು ಅಧ್ಯಕ್ಷತೆ ವಹಿಸಿದ್ದರು.

ವಚನ ಸಾಹಿತ್ಯದ ಕುರಿತಾದ ಮಾಮೂಲೀ ಮಾತುಗಳನ್ನು ತಿರಸ್ಕರಿಸಿ ಹೊಸ ರೀತಿಯಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತಾಡಿದರು. ಮುಖ್ಯವಾಗಿ ಅವರು ಇಂದಿನ ಕನ್ನಡ ಸಾಹಿತ್ಯ ಚರ್ಚೆ ಮತ್ತು ವಿಮರ್ಶೆಗಳು ಯಾವುದೇ ಕೃತಿ ಅಥವಾ ಅದಕ್ಕಿಂತ ಹೆಚ್ಚಾಗಿ ಅದರ ಕೃತಿಕಾರನನ್ನು ಹೇಗೆ ನೋಡಬೇಕು ಎಂದು ಮೊದಲೇ ನಿರ್ಧರಿಸಿ ಓದುಗರೂ ಹಾಗೆಯೇ ತಿಳಿಯತಕ್ಕದ್ದು ಎಂದು ಆಗ್ರಹಿಸುತ್ತವೆ. ಹೀಗಾಗಿ ಸಹಜವಾಗಿಯೇ ಹನ್ನೆರಡನೆಯ ಶತಮಾನದ ವಚನ ಸಾಹಿತ್ಯವೂ ಇಂಥ ನಿರ್ದೇಶನದ ವ್ಯಾಪ್ತಿಯಲ್ಲಿ ಬಂದುಬಿಟ್ಟಿದೆ. ಓದುಗನ ಮೇಲೆ ಹೇರಲಾಗುವ ಈ ಬಗೆಯ ನಿರ್ದೇಶನದಿಂದ ಸಾಹಿತ್ಯಕ್ಕಾಗಲೀ ಓದುಗನಾಗಲೀ ಲಾಭಕ್ಕಿಂತ ನಷ್ಟವೇ ಹೆಚ್ಚು. ವಚನ ಸಾಹಿತ್ಯ ಕುರಿತು ಹೀಗೆ ಹೇರಲಾಗಿರುವ 'ಓದುವ-ತಿಳಿಯುವ ಕ್ರಮದ ನಿರ್ದೇಶನ'ದಿಂದಾಗಿ ಸಾಹಿತ್ಯವನ್ನು ಸಹಜವಾಗಿ ಓದುವವರಿಗೆ ಹುಟ್ಟುವ ಪ್ರಶ್ನೆಗಳಿಗೆ ಸಮಂಜಸ ಉತ್ತರ ದೊರೆಯುತ್ತಿಲ್ಲ. ಇಂಥ ಸಂದರ್ಭದಲ್ಲಿ ಓದುಗರು ತಮ್ಮ ಓದಿನ ದೋಷವನ್ನು ಅರ್ಥಮಾಡಿಕೊಂಡು ಬೇರೆ ರೀತಿಯಲ್ಲಿ ಓದಿಕೊಳ್ಳುವ ಮಾರ್ಗ ಹುಡುಕಬೇಕಾಗುತ್ತದೆ? ಎಂದು ಹೇಳಿದರು.

ಅವರು ಮುಂದುವರಿದು-'ಸೈದ್ಧಾಂತಿಕ ಚೌಕಟ್ಟು ಮೀರಿದ ಅಧ್ಯಾತ್ಮದ ನೆಲೆಯಲ್ಲಿ ನೋಡುತ್ತ ಹೋದರೆ ಎಲ್ಲ ವಚನಗಳೂ ಅರ್ಥವಾಗುತ್ತ ಹೋಗುತ್ತವೆ. ಅಧ್ಯಾತ್ಮದ ನೆಲೆಯಲ್ಲಿ ಕುಲ, ಜಾತಿ, ಮತ, ಪಂಗಡ ಮೊದಲಾದ ಸಂಗತಿಗಳಿಗೆ ಜಾಗವಿಲ್ಲ. ಮನುಷ್ಯ ಸಹಜವಾಗಿ ಹುಡುಕುವ ನೆಮ್ಮದಿ ಮತ್ತು ಆನಂದಗಳನ್ನು ಪಡೆಯುವ ಭಾರತೀಯ ಪರಂಪರೆಯಲ್ಲಿನ ಅನೇಕಾನೇಕ ಮಾರ್ಗಗಳಲ್ಲಿ ಒಂದಾದ ಶೈವ ಪಂಥದ ಶಿವಾಚಾರವನ್ನು ಸಮಾಜಕ್ಕೆ ನೀಡಿ ಆ ಮೂಲಕ ಆದರ್ಶ ಸಮಾಜ ಸ್ಥಾಪಿಸುವುದು ವಚನಕಾರರ ಉದ್ದೇಶವಾಗಿತ್ತೆಂದು ಭಾವಿಸಿ ವಚನಗಳನ್ನು ನೋಡುತ್ತ ಹೋದರೆ ಅದು ಉನ್ನತ ಸ್ತರಕ್ಕೆ ಒಯ್ಯುತ್ತದೆ ಮಾತ್ರವಲ್ಲ, ಅನುಮಾನಗಳನ್ನು ಪರಿಹರಿಸುತ್ತದೆ. ಇಂಥ ಸಂದರ್ಭದಲ್ಲೆಲ್ಲ ವಚನಕಾರರು ಕೇವಲ ಜಾತಿ, ಮತ, ಲಿಂಗ, ಕುಲದ ಶ್ರೇಷ್ಠತೆಯನ್ನೇ ನೆಚ್ಚುವ ಜನರನ್ನು ಪ್ರಶ್ನಿಸುತ್ತಾರೆ. ನಿಜವಾದ ಮಾರ್ಗ ಅದಲ್ಲ, ಇದು ಎಂದು ತೋರಿಸುತ್ತಾರೆ' ಎಂದು ಹೇಳಿದರು.

ಕನ್ನಡ ಪೀಠದ ಪ್ರಾಧ್ಯಾಪಕ ಪುರುಷೋತ್ತಮ ಬಿಳಿಮಲೆಯವರು ಅತಿಥಿಗಳನ್ನು ಪರಿಚಯಿಸಿ ಸ್ವಾಗತಿಸಿದರು. ಅ

***ಡಾ. ಪುರುಷೋತ್ತಮ ಬಿಳಿಮಲೆ***

## ಜೆಎನ್‌ಯು ಕನ್ನಡ ಭಾಷಾ ಪೀಠದಲ್ಲಿ

# "ರಾಷ್ಟ್ರ ನಿರ್ಮಾಣದಲ್ಲಿ ತಾಯಿ ನುಡಿಗಳ ಪಾತ್ರ" ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ

ನವದೆಹಲಿಯ ಜವಹರಲಾಲ್ ನೆಹರೂ ವಿಶ್ವ ವಿದ್ಯಾಲಯದ ಕನ್ನಡ ಭಾಷಾ ಪೀಠ ಮತ್ತು ಶೋಧ ಸಂಶೋಧ್ ಎಂಬ ಸಂಶೋಧನಾ ವಿದ್ಯಾರ್ಥಿಗಳ ವೇದಿಕೆಗಳ ಸಹಭಾಗಿತ್ವದಲ್ಲಿ "ರಾಷ್ಟ್ರ ನಿರ್ಮಾಣದಲ್ಲಿ ತಾಯಿ ನುಡಿಗಳ ಪಾತ್ರ" ಎಂಬ ವಿಷಯದ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಫೆಬ್ರವರಿ 21ರಂದು ಆಯೋಜಿಸಲಾಗಿತ್ತು. ವಿಚಾರಗೋಷ್ಠಿಯಲ್ಲಿ ಹಲವಾರು ವಿಭಾಗದ ಸಂಶೋಧನಾರ್ಥಿಗಳು, ವಿದ್ಯಾರ್ಥಿಗಳು ಭಾಗವಹಿಸಿ ಮಂಡನೆಯಾದ ಪ್ರಬಂಧಗಳ ಬಗ್ಗೆ ತಮ್ಮ ಅನಿಸಿಕೆ ಮತ್ತು ಅನುಮಾನಗಳನ್ನು ವ್ಯಕ್ತಪಡಿಸಿದರು. ಜೆ.ಎನ್. ಯು. ಕನ್ನಡ ಭಾಷಾ ಪೀಠದ ಮುಖ್ಯಸ್ಥರಾದ ಡಾ. ಪುರುಷೋತ್ತಮ ಬಿಳಿಮಲೆ ಅವರ ಶೋಧ ಸಂಶೋಧ್ ವೇದಿಕೆಯ ವಿನೂತನ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನೆರವೇರಿತು.

"ಪ್ರಾದೇಶಿಕ ಭಾಷೆಗಳು ಮತ್ತು ಭಾರತದ ಚಿಂತನೆ" ಖ್ಯಾತ ಹಿರಿಯ ಪತ್ರಕರ್ತರು ಹಾಗೂ ಸನ್ಮಾನ್ಯ ಲೋಕಸಭಾಧ್ಯಕ್ಷರ ಗೌರವ ಸಲಹೆಗಾರರೂ ಆಗಿರುವ ಶ್ರೀ ರಾಹುಲ್ ದೇವ್ ಅವರು ಉಪನ್ಯಾಸ ನೀಡಿದರು. ಭಾಷಾವಾರು ಜನಸಂಖ್ಯೆ ಮತ್ತು ಭಾರತೀಯ ಭಾಷೆಗಳು ಎಂಬ ವಿಷಯದ ಕುರಿತು ಜೆ.ಎನ್.ಯು.ನಲ್ಲಿ ಪ್ರಾಧ್ಯಾಪಕರಾಗಿರುವ ಡಾ. ಸುಶಾಂತ್ ಮಿಶ್ರ ಅವರು ಪ್ರಬಂಧ ಮಂಡಿಸಿದರು. ಜೆ.ಎನ್.ಯುನ ಮತ್ತೊಬ್ಬ ಪ್ರಾಧ್ಯಾಪಕಿ ಪ್ರೊ. ಆಶಾ ಸಾರಂಗಿ ಅವರು "ಸಂವಿಧಾನಬದ್ಧ ರಕ್ಷಣೆಗಳು ಮತ್ತು ಮಾತೃಭಾಷೆಗಳು" ಎಂಬ ವಿಷಯ ಕುರಿತು ಪ್ರಬಂಧ ಮಂಡಿಸಿದರು. ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಮಾತೃಭಾಷೆಯ ಸ್ಥಾನ" ಎಂಬ ವಿಷಯ ಕುರಿತು ಜೆ.ಎನ್.ಯು.ವಿನ ಝಾಕಿರ್ ಹುಸೇನ್ ಸೆಂಟರ್ ಆಫ್ ಎಜುಕೇಶನ್‌ನ ಡಾ. ಅರವಿಂದ ಕುಮಾರ್ ಮಿಶ್ರಾ.

"ಭಾರತದಲ್ಲಿನ ಆದಿವಾಸಿ ಭಾಷೆಗಳು" ಎಂಬ ವಿಷಯ ಕುರಿತು ಡಾ. ಗಂಗಾ ಸಹಾಯ್ ಮೀನಾ ಅವರು ಉಪನ್ಯಾಸ ನೀಡಿದರು. "ಭಾರತದಲ್ಲಿ ಇಂಗ್ಲಿಷಿನ ಪಾತ್ರ" ವಿಷಯ ಕುರಿತು ದೆಹಲಿ ವಿಶ್ವವಿದ್ಯಾಲಯ ದಯಾಳ್ ಸಿಂಗ್ ಕಾಲೇಜಿನ ಡಾ. ಸಚಿನ್, ಅವರು ಉಪನ್ಯಾಸ ನೀಡಿದರು. ಭಾರತದಲ್ಲಿ ಭಾಷಾ ರಾಜಕೀಯ ವಿಷಯ ಕುರಿತು ಡಾ. ಎನ್. ಚಂದ್ರಶೇಖರನ್ ಮಾತನಾಡಿದರು.

"ಮಾಧ್ಯಮ ಮತ್ತು ಅಧಿಕೃತ ಭಾಷೆ" ಕುರಿತಂತೆ ಶ್ರೀ ರಮೇಶ್ ಅರೋಲಿ ಅವರು ಪ್ರಬಂಧ ಮಂಡನೆ ಮಾಡಿದರು. ಶ್ರೀ ಎನ್.ಪಿ. ಚಂದ್ರಶೇಖರ್ ಅವರು 'ತ್ರಿಭಾಷಾ ಸೂತ್ರ' ಎಂಬ ವಿಷಯದ ಕುರಿತು ಪ್ರಬಂಧ ಮಂಡಿಸಿದರು. ಅ

***ಅಭಿಮತ ವರದಿ***

# ತ್ರಿಭಾಷಾಸೂತ್ರ



ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವ ವಿದ್ಯಾಲಯದಲ್ಲಿ "ರಾಷ್ಟ್ರ ನಿರ್ಮಾಣದಲ್ಲಿ ತಾಯಿ ನುಡಿಗಳ ಪಾತ್ರ" ಎಂಬ ವಿಷಯದ ಕುರಿತು ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ **ಶ್ರೀ ಎನ್.ಪಿ. ಚಂದ್ರಶೇಖರ್** ಅವರು ಮಂಡಿಸಿದ ಪ್ರಬಂಧ.

**"ತನ್ನ ದೇಶದಲ್ಲಿ ವಾಸಿಸುತ್ತಿರುವ ಇತರೆ ದೇಶೀಯರನ್ನು ನೀನು ಯಾರು? ನೀನು ಯಾವ ದೇಶದವ? ಎಂಬುದಾಗಿ ವಿಂಗಡಿಸಿ ಅವರನ್ನು ಮರಳುವಂತೆ ಒತ್ತಡ ಹೇರುತ್ತಿರುವ ಸಂದರ್ಭದಲ್ಲಿ ನೆನೆಪಿಗೆ ಬರುವ ವಿಶ್ವಗುರು, ಸಮಾಜ ಸುಧಾರಕ ಬಸವೇಶ್ವರರು ನುಡಿದ "ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ, ಇವನಮ್ಮವ ಇವನಮ್ಮವ ಇವನಮ್ಮವನೆಂದಿನಿಸಯ್ಯಾ"**

“1968ರಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಈ ತ್ರಿಭಾಷಾ ಸೂತ್ರಕ್ಕೆ ಈ ವರ್ಷ ಸುವರ್ಣ ಮಹೋತ್ಸವದ ಸಂಭ್ರಮ. ಆದರೆ ತ್ರಿಭಾಷ ಸೂತ್ರದ ಅನುಷ್ಠಾನದಲ್ಲಿ ಆಗಿರುವ ಲೋಪದೋಷಗಳಿಂದಾಗಿ ಸಂಭ್ರಮಿಸಿ ಆಚರಣೆ ಮಾಡಬೇಕಾದ ಪರಿಸ್ಥಿತಿ ನಿರ್ಮಾಣ ಕಳೆದ ಐವತ್ತು ವರ್ಷಗಳಲ್ಲಿ ನಿರ್ಮಾಣವಾಗದಿರುವುದು ದುರದುಷ್ಟಕರ. ನಮ್ಮ ದೇಶದ ಜನಗಣತಿ ನಡೆಸುವ ಸಂದರ್ಭದಲ್ಲಿ ಸರ್ಕಾರ ಕಲೆ ಹಾಕಿರುವ ಮಾಹಿತಿಯನ್ನಾಧರಿಸಿ ಹೇಳುವುದಾದರೆ ಕಳೆದ 2001ರ ಜನಗಣತಿ ಪ್ರಕಾರ ನಮ್ಮ ದೇಶದ ಜನಸಂಖ್ಯೆಯಲ್ಲಿ ಮೂರು ಭಾಷೆಗಳನ್ನು ಬಲ್ಲವರ ಸಂಖ್ಯೆ 8.51% ಆಗಿದೆ. ಇದು 1991ರಲ್ಲಿ 7.90% ರಷ್ಟಿತ್ತು. ಇನ್ನು ಎರಡು ಭಾಷೆಗಳನ್ನು ಮಾತನಾಡುವರು ಒಟ್ಟು ಜನಸಂಖ್ಯೆಯ ಶೇಕಡ 9.7%ರಷ್ಟು ಜನ 1961ರ ಜನಗಣತಿಯಲ್ಲಿ ಕಂಡು ಬಂದರೆ ಕಳೆದ 2001ರ ಜನಗಣತಿಯ ಪ್ರಕಾರ ಇವರ ಸಂಖ್ಯೆ 24.79% ಆಗಿದೆ. ಇದರಿಂದ ತಿಳಿಯುವುದೇನೆಂದರೆ ತ್ರಿಭಾಷಾ ಸೂತ್ರವನ್ನು ನಮ್ಮ ದೇಶದಲ್ಲಿ ಜಾರಿಗೆ ತಂದಿದ್ದರೂ ಕೂಡ ಕೇವಲ ಶೇಕಡ 25 ರಷ್ಟು ಜನರಿಗೆ ಎರಡು ಭಾಷೆಗಳ ಮತ್ತು ಕೇವಲ ಶೇ.9 ರಷ್ಟು ಮೂರು ಭಾಷೆಗಳನ್ನು ಕಲಿಸಲು ಮಾತ್ರ ನಮ್ಮ ಶಿಕ್ಷಣ ವ್ಯವಸ್ಥೆಗೆ ಸಾಧ್ಯವಾಗಿದೆ. ಈ ಅಂಕಿ ಅಂಶಗಳು ತ್ರಿಭಾಷಾ ಸೂತ್ರ ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಬೇಕಿತತೋ ಅಷ್ಟು ಮಟ್ಟಿಗೆ ಅನುಷ್ಠಾನ ಗೊಂಡಿಲ್ಲ ಎಂಬುದನ್ನು ತಿಳಿಸುತ್ತವೆ.

ಇನ್ನು ರಾಷ್ಟ್ರ ನಿರ್ಮಾಣದಲ್ಲಿ ತಾಯಿನುಡಿಗಳ ಪಾತ್ರವನ್ನು ಕುರಿತು ಆಲೋಚಿಸಿದಾಗ ‘ರಾಷ್ಟ್ರನಿರ್ಮಾಣ’ ಎನ್ನುವುದು ಇಟ್ಟಿಗೆ ಸಿಮೆಂಟುಗಳಿಂದ ಕಟ್ಟಬಹುದಾದ ಭೌತಿಕ ರಚನೆಯಂತೂ ಖಂಡಿತ ಅಲ್ಲ. ವಿಶಾಲಾರ್ಥದಲ್ಲಿ ಇದು ರಾಷ್ಟ್ರದ ಪ್ರಜೆಗಳ ಮನಸ್ಸುಗಳಲ್ಲಿ ಭಾವಾನಾತ್ಮಕ ಸಂಬಂಧಗಳನ್ನು ಬೆಳೆಸುವುದು, ಒಂದು ಭೌಗೋಳಿಕ / ಗಡಿ ಪ್ರದೇಶದಲ್ಲಿ ವಾಸಿಸುತ್ತಿರುವ ನಾವೆಲ್ಲ ಒಂದು ಎಂಬ ಭಾವನೆ ದೇಶವಾಸಿಗಳ ಹೃನ್ಮನಗಳಲ್ಲಿ ಮೊಳಕೆಯೊಡೆಯುವಂತೆ ಮಾಡುವುದಾಗಿದೆ. ಭಾರತದಂತಹ ವೈವಿಧ್ಯಮಯ ಸಂಸ್ಕೃತಿ, ಭಾಷೆ, ಭೌಗೋಳಿಕತೆಗಳನ್ನು ಹೊಂದಿರುವ ವಿಶಾಲ ರಾಷ್ಟದ ನಿರ್ಮಾಣ ಗಟ್ಟಿಯಾಗಿ ಜನ–ಮನಗಳಲ್ಲಿ ಬೇರೂರಿ ನಿಲ್ಲಬೇಕಾದರೆ ಎಲ್ಲ ಭಾಷಿಕ ಸಮುದಾಯದ ಜನರನ್ನು ಪರಸ್ಪರ ಗೌರವದಿಂದ ಕಂಡು ಆಧರಿಸಿದಾಗ ಪ್ರತಿಯೊಬ್ಬ ದೇಶವಾಸಿಗಳಲ್ಲಿ ಆತ್ಮ ವಿಶ್ವಾಸ ಮೂಡುತ್ತದೆ. ಇದು ಸಾಧ್ಯವಾಗಬೇಕಾದರೆ ಸಂಭಂಧಿಸಿದ ಇಲಾಖೆಗಳು ಸಂವಿಧಾನಬದ್ಧವಾದ ರೀತಿಯಲ್ಲಿ ನೆಲದ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮುಂದಾಗಬೇಕು. ಉದಾಹರಣೆಗೆ 1968ರಲ್ಲಿ ಸಂಸತ್ತಿನ ಎರಡೂ ಸದನಗಳಲ್ಲಿ ಅನುಮೋದನೆಗೊಂಡ ತ್ರಿಭಾಷಾ ಸೂತ್ರದ ನಿರ್ಣಯದ ಪ್ರಕಾರ ?ಹಿಂದಿ ಭಾಷೆಯ ಪ್ರಾಬಲ್ಯವಿರುವ ರಾಜ್ಯಗಳಲ್ಲಿ ವಿದ್ಯಾರ್ಥಿಗಳು ಹಿಂದಿ, ಇಂಗ್ಲಿಷ್ ಭಾಷೆಗಳ ಜೊತೆಗೆ ಯಾವುದಾದರೂ ಒಂದು ಆಧುನಿಕ ಭಾರತೀಯ ಭಾಷೆಯನ್ನು, ಮುಖ್ಯವಾಗಿ ದಕ್ಷಿಣ ಭಾರತದ ಯಾವುದಾದರೊಂದು ಭಾಷೆಯನ್ನು ಕಲಿಯುವುದಕ್ಕೆ ಪ್ರೋತ್ಸಾಹಿಸಬೇಕು. ಹಾಗೆಯೇ ಹಿಂದಿಯೇತರ ರಾಜ್ಯಗಳಲ್ಲಿ ವಿದ್ಯಾರ್ಥಿಗಳು ಹಿಂದಿ, ಇಂಗ್ಲಿಷ್ ಜೊತೆಗೆ ಆಯಾ ರಾಜ್ಯದ ಅಧಿಕೃತ ಭಾಷೆಯನ್ನು ಕಲಿಯಬೇಕು? ಎಂಬುದಾಗಿದೆ. ಈ ಸೂತ್ರವನ್ನು ತಮಿಳುನಾಡು ರಾಜ್ಯ ಮತ್ತು ಪುದುಚೇರಿಗಳು ಸ್ವೀಕರಿಸಲಿಲ್ಲ. ಇನ್ನು ಉತ್ತರದ ರಾಜ್ಯಗಳಲ್ಲಿ ಯಾವುದೇ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಇದನ್ನು ಜಾರಿ ಮಾಡಿಲ್ಲ. ಬದಲಾಗಿ ಕೇಂದ್ರ ಸರ್ಕಾರ ಜವಹರ ನವೋದಯ ವಿದ್ಯಾಲಯಗಳಲ್ಲಿ ಮಾತ್ರ ತ್ರಿಭಾಷಾ ಸೂತ್ರ ಜಾರಿಗೆ ತಂದಿದ್ದು ಇನ್ನಿತರ ಕೇಂದ್ರೀಯ ವಿದ್ಯಾಲಯಗಳಲ್ಲಿ ಎಲ್ಲಿಯೂ ಕೂಡ ದಕ್ಷಿಣ ಭಾರತದ ಒಂದು ಭಾಷೆಯನ್ನು ಕಲಿಸುವ ವ್ಯವಸ್ಥೆ ಮಾಡಲಿಲ್ಲ. ಆದರೆ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳಲ್ಲಿ ಹಿಂದಿಯನ್ನು ತೃತೀಯ ಭಾಷೆಯನ್ನಾಗಿ ಅಲ್ಲಿನ ರಾಜ್ಯ ಸರ್ಕಾರಗಳು ಕಲಿಸುತ್ತಿವೆ. ಅದಕ್ಕಾಗಿ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾ ಬರುತ್ತಿವೆ. ಇನ್ನು ದಕ್ಷಿಣದ ಭಾಷೆಗಳನ್ನು ಉತ್ತರ ಭಾರತದ ರಾಜ್ಯಗಳಲ್ಲಿ ಮುಖ್ಯವಾಗಿ ದೆಹಲಿ ಮತ್ತು ಎನ್.ಸಿ.ಆರ್. ಹಾಗೂ ಪ್ರಮುಖ ನಗರಗಳಲ್ಲಿನ ಕೇಂದ್ರೀಯ ವಿದ್ಯಾಲಯಗಳಲ್ಲಿ ಆಯ್ದ ಕೆಲವು ಶಾಲೆಗಳಲ್ಲಿಯಾದರೂ ಕನಡವೂ ಸೇರಿದಂತೆ ಇತರೆ ದಕ್ಷಿಣದ ಮತ್ತು ಹಿಂದಿಯೇತರ ಭಾರತೀಯ ಭಾಷೆಗಳನ್ನು ಕಲಿಸುವ ವ್ಯವಸ್ಥೆ ಕಟ್ಟುನಿಟ್ಟಾಗಿ ಜಾರಿಯಾಗಬೇಕಾದ ಅನಿವಾರ್ಯ ಇವೊತ್ತಿನ ಸಂದರ್ಭದಲ್ಲಿದೆ. ಏಕೆಂದರೆ ಇತ್ತೀಚಿನ ವರ್ಷಗಳಲ್ಲಿ ದೆಹಲಿ ಮತ್ತು ಎನ್.ಸಿ.ಆರ್.ನಲ್ಲಿ ಮತ್ತು ಇತರೆ ಮಹಾನಗರಗಳಲ್ಲಿ ಹಿಂದಿಯೇತರ ಭಾಷಿಕರ ಸಂಖ್ಯೆ ಗಣನೀಯವಾಗಿ ಏರುತ್ತಿದೆ. ಲಕ್ಷ ಲಕ್ಷ ಸಂಖ್ಯೆಯಲ್ಲಿ ದಕ್ಷಿಣ ಭಾರತೀಯರು ದೆಹಲಿಯಲ್ಲಿ ನೆಲೆಸಿದ್ದಾರೆ. ಇಂತಹ ವಲಸಿಗ ಕುಟುಂಬಗಳು ತಮ್ಮ ಮುಂದಿನ ಪೀಳಿಗೆಗೆ ತಮ್ಮ ಮಾತೃಭಾಷೆಯಲ್ಲಿ ಅರಿವನ್ನು ಸಮರ್ಥವಾಗಿ ಮೂಡಿಸಲು ಮತ್ತು ಮಾತೃಭಾಷೆಯಲ್ಲಿ ಸಾಕ್ಷರರನ್ನಾಗಿಸಲು ಸಾಧ್ಯವಾಗದಿರುವುದು ಕಳವಳಕಾರಿ ಸಂಗತಿಯಾಗಿದೆ. ತಾವು ವಾಸಮಾಡುತ್ತಿರುವ ಪ್ರದೇಶಗಳಲ್ಲಿನ ಶಾಲೆಗಳಲ್ಲಿ ಅವಕಾಶ ದೊರಕದೇ ಇರುವುದರಿಂದ ನಮ್ಮ ಮಾತೃಭಾಷೆಗಳ ಅರಿವು ನಮ್ಮ ಮಕ್ಕಳಿಗೆ ತಲುಪದಂತಾಗುತ್ತಿರುವದಷ್ಟೇ ಅಲ್ಲದೆ ಕೌಟುಂಬಿಕ ಮೌಲ್ಯಗಳನ್ನು ಕೂಡ ಕಳೆದುಕೊಳ್ಳುತ್ತಿರುವ ದುಖದಾಯಕ ಮತ್ತು ಅತಂತ್ರ ಸ್ಥಿತಿ ನಿರ್ಮಾಣವಾಗುತ್ತಿದೆ. ಹೊರನಾಡಿನಲ್ಲಿ ನೆಲೆಗೊಂಡಿರುವ ಕನ್ನಡದ ಮಕ್ಕಳು ತಾಯ್ನಾಡಿನಲ್ಲಿರುವ ಸಂಬಂಧಿಗಳ ಜೊತೆ ಮಾತನಾಡುವ, ಭಾವನೆಗಳನ್ನು ಹಂಚಿಕೊಳ್ಳುವ ಸಂದರ್ಭದಲ್ಲಿ ಹೃದಯ ಸ್ಪರ್ಶಿ ಸಂವಾದ ನಡೆಸಲು ಸಾಧ್ಯವಾಗುತ್ತಿಲ್ಲ. ಬಹುತೇಕ ಹೊರನಾಡ ಕನ್ನಡ ಕುಟುಂಬಗಳಲ್ಲಿನ ಎರಡು ಮತ್ತು ಮೂರನೇ ತಲೆಮಾರಿನ ಮಕ್ಕಳಿಗೆ ಕನ್ನಡ ಮಾತನಾಡಲು, ಓದಲು, ಬರೆಯಲು ಬರದಂತಾಗಿದೆ. ನಮ್ಮ ಮಾತೃಭಾಷೆಯ ಓದು ಬರಹ ಕಲಿಯದ ನಮ್ಮ ಮಕ್ಕಳು ಸುಲಭ, ಸರಳ, ಸುಲಲಿತವಾಗಿ ಭಾಷೆ ಬಳಕೆ ಮಾಡಲಾಗದೆ ಅವರ ನಂತರದ ಪೀಳಿಗೆಗೆ ನಮ್ಮ ಮಾತೃಭಾಷೆಯ ಸಂಪರ್ಕವನ್ನೇ ಕಳೆದುಕೊಂಡಿರುವ ನೂರಾರು ಕುಟುಂಬಗಳು ನಮಗೆ ಕಾಣಸಿಗುತ್ತಿವೆ.

ಸದೃಢವಾದ ರಾಷ್ಟ್ರ ನಿರ್ಮಾಣ ಸಾಧ್ಯವಾಗಬೇಕಾದರೆ ಮೊದಲು ಸಮಾಜದ ಅತಿ ಚಿಕ್ಕ ಘಟಕವೆನಿಸಿದ ಕುಟುಂಬದಲ್ಲಿ ಒಳ್ಳೆಯ ಮೌಲ್ಯಾಧಾರಿತ ವಾತಾವರಣ ನಿರ್ಮಾಣವಾಗಬೇಕು. ಅದರಿಂದ ಆರೋಗ್ಯಕರ ಸಮಾಜದ ನಿರ್ಮಾಣ ಆಗಬೇಕು, ಆನಂತರವಷ್ಟೇ ನಮ್ಮ ಕನಸಿನ ರಾಷ್ಟ್ರ ನಿರ್ಮಾಣ ನನಸಾಗಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಈ ನೆಲದ ಕಾನೂನಾಗಿ ರೂಪುಗೊಂಡಿರುವ ತ್ರಿಭಾಷಾ ಸೂತ್ರವನ್ನು ಸಂವಿಧಾನಾತ್ಮಕವಾಗಿ ಜಾರಿಗೊಳಿಸುವ ಮೂಲಕ ಪ್ರತಿಯೊಬ್ಬ ಭಾರತೀಯ ಪ್ರಜೆಯ ಮನಸ್ಸಿನಲ್ಲಿಯೂ ನನ್ನ ದೇಶ, ನನ್ನ ಭಾಷೆ, ನನ್ನ ನಾಡು ಎಂಬ ಆಪ್ತ ಭಾವನೆ ಮೊಳಕೆಯೊಡೆಯಲು ಅಗತ್ಯ ಕ್ರಮ ಕೈಗೊಳ್ಳಬೇಕು.

ಮತ್ತೊಂದು ಅಂಶವೇನೆಂದರೆ ಭಾರತದ ವಿವಿಧ ರಾಜ್ಯಗಳ ಜೊತೆ ವ್ಯವಹರಿಸುವಾಗ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ನಡುವಿನ ಸಂಪರ್ಕ ಭಾಷೆ ಯಾವುದಿರಬೇಕೆಂಬ ಬಗ್ಗೆ ಜಾರಿಯಾಗಿರುವ ನಿಯಮಗಳ ಪ್ರಕಾರ ದೇಶದ ಎಲ್ಲ ರಾಜ್ಯಗಳನ್ನು ‘ಎ’, ‘ಬಿ’, ‘ಸಿ’ ಎಂದು ಮೂರು ಗುಂಪುಗಳಾಗಿ ವರ್ಗೀಕರಿಸಿದ್ದು ಕರ್ನಾಟಕ ಮತು ಇತರ ದಕ್ಷಿಣದ ರಾಜ್ಯಗಳು ‘ಸಿ’ ಗುಂಪಿನಲ್ಲಿವೆ. ಈ ‘ಸಿ’ ಗುಂಪಿನ ರಾಜ್ಯಗಳ ಜೊತೆ ವ್ಯವಹಾರಿಸುವಾಗ ಕೇಂದ್ರ ಸರ್ಕಾರ ಮತ್ತು ಕೇಂದ್ರದ ಅದೀನ ಕಚೇರಿಗಳು ಇಂಗ್ಲಿಷ್ ಮತ್ತು ಆಯಾ ರಾಜ್ಯಗಳ ಅಧಿಕೃತ ಭಾಷೆಯಲ್ಲಿ ವ್ಯವಹರಿಸಬೇಕು. ಹೀಗಿದ್ದರೂ ಕೂಡ ಬೆಂಗಳೂರು ಮೆಟ್ರೊದಲ್ಲಿ ಹಿಂದಿ ನಾಮಫಲಕ ಹಾಕುವುದು, ಐ.ಎ.ಎಸ್. ಅಧಿಕಾರಿಗಳು ಹಾಗೂ ಬ್ಯಾಂಕಿನ ಸಿಬ್ಬಂದಿಗಳು ಕನ್ನಡದಲ್ಲಿ ವ್ಯವಹರಿಸಲು ನಿರ್ಲಕ್ಷ ತೋರುವುದು ಭಾಷಿಕರ ಭಾವನೆಗಳಿಗೆ ನೋವುಂಟು ಮಾಡುವಂತಹ ಘಟನೆಗಳು ವರದಿಯಾಗುತ್ತಿರುವುದು ದುರದೃಷ್ಟಕರ. ಇಪ್ಪತ್ತೊಂದನೆ ಶತಮಾನದ ಜಗತ್ತಿನಲ್ಲಿ ನಮ್ಮ ದೇಶ ಇತರೆ ರಾಷ್ಟ್ರಗಳನ್ನು, ಮುಖ್ಯವಾಗಿ ಅಭಿವೃದ್ದಿ ಹೊಂದಿದ ರಾಷ್ಟ್ರಗಳೂ ಕೂಡ ಉಬ್ಬೇರಿಸುವಂತಹ ರೀತಿಯಲ್ಲಿ ಮಾಹಿತಿ ತಂತ್ರಜ್ಞಾನದಲ್ಲಿ ದಾಪುಗಾಲನ್ನು ಇಡುತ್ತಿದ್ದು ವಿಶೇಷವಾಗಿ ಐ.ಟಿ.ಸಿಟಿ/ ಸಿಲಿಕಾನ್ ನಗರ ಎಂದೆಲ್ಲ ಅಭಿದಾನಗಳನ್ನು ಹೊತ್ತು ವಿಶ್ವದ ಗಮನ ಸೆಳೆಯುತ್ತಿರುವ ಕೆಂಪೇಗೌಡರು ಕಟ್ಟಿದ ಕರ್ನಾಟಕದ ರಾಜಧಾನಿ ಬೆಂಗಳೂರು ಮತ್ತು ಜಗತ್ತಿನ ದೊಡ್ಡಣ್ಣ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತನ್ನ ದೇಶದಲ್ಲಿ ವಾಸಿಸುತ್ತಿರುವ ಇತರೆ ದೇಶೀಯರನ್ನು ನೀನು ಯಾರು? ನೀನು ಯಾವ ದೇಶದವ? ಎಂಬುದಾಗಿ ವಿಂಗಡಿಸಿ ಅವರನ್ನು ಮರಳುವಂತೆ ಒತ್ತಡ ಹೇರುತ್ತಿರುವ ಸಂದರ್ಭದಲ್ಲಿ ನೆನೆಪಿಗೆ ಬರುವ ವಿಶ್ವಗುರು, ಸಮಾಜ ಸುಧಾರಕ ಬಸವೇಶ್ವರರು ನುಡಿದ “ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ, ಇವನಮ್ಮವ ಇವನಮ್ಮವ ಇವನಮ್ಮವನೆಂದೆನಿಸಯ್ಯಾ” ಎಂಬ ಸಾರ್ವತ್ರಿಕ, ಸಾರ್ವಕಾಲಿಕ ಸಂದೇಶವನ್ನು ಸಾರಿದ ಕನ್ನಡದ ವಚನಕಾರರು ಮತ್ತು ಅವರು ಜನಭಾಷೆ ಕನ್ನಡವನ್ನು ಮೊದಲ ಬಾರಿಗೆ ಸಾಹಿತ್ಯದ ಗದ್ದುಗೆಗೇರಿಸಿ ವಿರಾಜಮಾನವನ್ನಾಗಿಸಿದ್ದು– ಇವೆಲ್ಲವನ್ನು ಗಮನಿಸಿದಾಗ ನಮ್ಮ ದೇಶದ ಮಣ್ಣಿನ ವಾಸನೆ ಸುವಾಸನೆಭರಿತ ಹೂವಿನಂತೆ ಅರಳಿ ನಳನಳಿಸುವಂತಾಗಲು ನಮ್ಮ ನೆಲದ ಭಾಷೆಯಲ್ಲಿ ಅಭಿವ್ಯಕ್ತಿ ಪಡೆದಾಗ ಮಾತ್ರಸಾಧ್ಯ ಎಂದು ಮನದಟ್ಟಾಗುತ್ತದೆ. ಆದ್ದರಿಂದ ನಮ್ಮ ದೇಶದ ಎಲ್ಲ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಭಾರತೀಯ ಭಾಷೆಗಳನ್ನು ಉಳಿಸಿ ಬೆಳೆಸಿ ಪ್ರವರ್ಧಮಾನಕ್ಕೆ ತರುವ ಮೂಲಕ ವಿಶ್ವದಲ್ಲಿಯೇ ಸಾಂಸ್ಕೃತಿಕವಾದ ಶ್ರೀಮಂತ ರಾಷ್ಟ್ರವೆಂಬ ಹೆಗ್ಗಳಿಕೆಯನ್ನು ಉಳಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಬೇಕಾದ ತುರ್ತು ಇವೊತ್ತು ಎದುರಾಗಿದೆ. ಅದಕ್ಕೆ ತ್ರಿಭಾಷಾ ಸೂತ್ರವನ್ನು ಅದರ ಉದ್ದೇಶ ಮತ್ತು ಗುರಿಗಳ ಅನ್ವಯ ಜಾರಿಗೊಳಿಸುವುದು ಅತ್ಯಗತ್ಯವಾಗಿದೆ. ಅ



# ಸಣ್ಣ ಭಾಷೆಗಳ ಉಳಿಯುವಿಕೆಯ ಕುರಿತು ಸಂವಾದ ನಡೆಯುತ್ತಿಲ್ಲ -ಡಾ. ಬಿಳಿಮಲೆ

ನವದೆಹಲಿಯ ಬಾಂಗ್ಲಾ ದೇಶದ ರಾಯಭಾರ ಕಛೇರಿಯಲ್ಲಿ ಇದೇ ಫೆಬ್ರವರಿ 21ರಂದು ತಾಯಿನುಡಿ ದಿನಾಚರಣೆಯನ್ನು ಸಂದರ್ಭದಲ್ಲಿ “ಜಾಗತೀಕರಣಗೊಳ್ಳುತ್ತಿರುವ ಜಗತ್ತಿನಲ್ಲಿ ತಾಯಿನುಡಿಗಳ ಪಾತ್ರ” ಎಂಬ ವಿಷಯ ಕುರಿತು ಉಪನ್ಯಾಸ ಏರ್ಪಡಿಸಲಾಗಿತ್ತು. ಜವಹರಲಾಲ್ ನೆಹರೂ ವಿಶ್ವ ವಿದ್ಯಾಲಯದ ಕನ್ನಡ ಭಾಷಾ ಪೀಠದ ಮುಖ್ಯಸ್ಥರಾಗಿರುವ ಡಾ. ಪುರುಷೋತ್ತಮ ಬಿಳಿಮಲೆ ಅವರು ಮುಖ್ಯ ಅತಿಥಿಯಾಗಿದ್ದರು. ಸಮಾರಂಭದಲ್ಲಿ ಬಾಂಗ್ಲಾ ಎಂಬೆಸ್ಸಿಯ ಹೈ ಕಮಿಷನರ್ ಸಯ್ಯದ್ ಮೊಝುಯಿಮ್, ಡಾ. ನಂದಿತಾ ಬಸು, ಶ್ರೀ ಹಿರಣ್ಮಯ್ ಕಾರ್ಲೇಕರ್, ಶ್ರೀ ಶಿಗೆರು ಓಯೇಗಿ, ಮತ್ತಿತರ ಗಣ್ಯರು ಭಾಗವಹಿಸಿದ್ದರು. ಪ್ರತಿ ವರ್ಷ ಫೆಬ್ರವರಿ ತಿಂಗಳ ಇಪ್ಪತ್ತೊಂದನೆ ತಾರೀಖನ್ನು ಅಂತರರಾಷ್ಟ್ರೀಯ ತಾಯಿ ನುಡಿ ದಿನಾಚರಣೆಯನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಅಂದು ಬಾಂಗ್ಲಾದೇಶದ ಯುವಕರು ಅಸ್ಸಾಮಿ ಭಾಷೆಯ ಹೇರಿಕೆಯನ್ನು ಪ್ರತಿಭಟಿಸಿ ತಮ್ಮ ಮಾತೃಭಾಷೆಯಾದ ಬಾಂಗ್ಲಾವನ್ನು ಕಲಿಯಲು ದಿನನಿತ್ಯ ಬಳಕೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಹೋರಾಡಿ ತಮ್ಮ ಪ್ರಾಣ ತ್ಯಾಗ ಮಾಡಿದ ಘಟನೆಯ ಸ್ಮರಣಾರ್ಥವಾಗಿ ಆ ದಿನವನ್ನು ತಾಯಿ ನುಡಿ ದಿನ ವನ್ನಾಗಿ ವಿಶ್ವಸಂಸ್ಥೆ ಘೋಷಣೆ ಮಾಡಿದೆ. ಈ ಕಾರ್ಯಕ್ರಮದಲ್ಲಿ ಬಾಂಗ್ಲಾ ಭಾಷಿಕ ಭಾರತೀಯ ಮತ್ತು ಬಾಂಗ್ಲಾದೇಶೀಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಇಂಗ್ಲಿಷ್‌ನ ಪ್ರಾಬಲ್ಯವು ದಿನೇ ದಿನೇ ಹೆಚ್ಚುತ್ತಿದ್ದು ಜಗತ್ತಿನಾದ್ಯಂತ ಸಜೀವವಾಗಿರುವ ಸಾವಿರಾರು ಸಣ್ಣ ಭಾಷೆಗಳನ್ನು ಅದು ಸಾಯಿಸುತ್ತಿರುವುದರ ಬಗ್ಗೆ ಆಯಾ ದೇಶಗಳ ಸರಕಾರಗಳು

> ಯುನೆಸ್ಕೋವು ಸಿದ್ಧಪಡಿಸಿದ ‘ಭಾಷೆಗಳ ಜಾಗತಿಕ ಭೂಪಟ’ವು ಭಾರತದಲ್ಲಿನ 172 ಭಾಷೆಗಳನ್ನು ಅಪಾಯದ ಅಂಚಿನಲ್ಲಿರುವ ಭಾಷೆಗಳೆಂದೂ, ಅದರಲ್ಲಿ 101 ಭಾಷೆಗಳನ್ನು ಅತೀವ ಅಪಾಯದಲ್ಲಿರುವ ಭಾಷೆಗಳೆಂದೂ 71 ಭಾಷೆಗಳನ್ನು ಎಲ್ಲ ಬಗೆಯ ಅಪಾಯಗಳಿಗೆ ಬಲಿಯಾಗುತ್ತಿರುವ ಭಾಷೆಗಳೆಂದೂ ಗುರುತಿಸಿದೆ

ಏನೂ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಡಾ. ಬಿಳಿಮಲೆಯವರು ವಿವರಿಸಿದರು. ಅಧಿಕಾರಿಗಳು ಮತ್ತು ಸರಕಾರಗಳು ಸಣ್ಣ ಭಾಷೆಗಳ ಕುರಿತು ತೋರುತ್ತಿರುವ ನಿರ್ಲಕ್ಷ್ಯ ದಿಂದಾಗಿ ಅವುಗಳು ಜಗತ್ತಿನಾದ್ಯಂತ ಅವಸಾನದ ಅಂಚಿನಲ್ಲಿವೆ ಮಾತ್ರವಲ್ಲ, ಇಂಗ್ಲಿಷಿನ ಅಧಿಪತ್ಯವನ್ನು ಸುಲಭವಾಗಿ ಒಪ್ಪಿಕೊಳ್ಳುವಂತೆ ಮಾಡಿವೆ. ಇಂದು ಎಲ್ಲೆಡೆಯೂ ಸಣ್ಣ ಭಾಷೆಗಳ ಧ್ವನಿ ಉಡುಗಿವೆ, ಅವುಗಳ ನಾಲಗೆ ಕಟ್ಟಿಹೋಗಿವೆ. ಉಳಿಯುವಿಕೆಗಾಗಿ ಅವು ಹೆಣಗಾಡುತ್ತಿವೆ. ಕಲಿಕೆ ಮತ್ತು ಉಪಯೋಗಗಳ ವಿಷಯದಲ್ಲಿ ಇಂಗ್ಲಿಷ್ ಜಗತ್ತಿನಾದ್ಯಂತ ಸಾವಿರಾರು ಸಣ್ಣ ಭಾಷೆಗಳನ್ನು ಅಪಾಯದ ಅಂಚಿಗೆ ತಳ್ಳಿದೆ. ಮಾತೃ ಭಾಷೆಯಲ್ಲಿಎಲ್ಲವನ್ನೂ ಸಾಧಿಸಿದ ದೇಶಗಳು ಕೂಡಾ ಇಂದು ಇಂಗ್ಲಿಷಿಗಾಗಿ ಹಪಹಪಿಸುತ್ತಾ ತಮ್ಮದೇ ದೇಶದ ಭಾಷೆಗಳ ಸಾವಿಗೆ ಕಾರಣವಾಗುತ್ತಿವೆ. ಭಾರತದಲ್ಲಿಯಂತೂ ಈ ಸಮಸ್ಯೆ ಇನ್ನೂ ತೀವ್ರತರವಾಗಿದ್ದರೂ, ಕೋಮುವಾದ, ಧರ್ಮ, ಭ್ರಷ್ಟಾಚಾರ, ಜಾತಿ, ರಾಜಕೀಯ, ಮತ್ತಿತರ ವಿಷಯಗಳ ಕುರಿತು ಇಲ್ಲಿ ಚರ್ಚೆ ನಡೆಯುತ್ತಿರುವ ಹಾಗೆ, ಅವಸಾನದ ಅಂಚಿನಲ್ಲಿರುವ ಸಣ್ಣ ಭಾಷೆಗಳ ಉಳಿಯುವಿಕೆಯ ಕುರಿತು ಸಂವಾದ ನಡೆಯುತ್ತಿಲ್ಲ. ಇಂದು ಈ ದೇಶದಲ್ಲಿ ಬಹಳ ಪ್ರಭಾವಶಾಲಿಯಾಗಿರುವ ಮಾಧ್ಯಮಗಳಿಗೂ ಈ ಕುರಿತು ಆಸಕ್ತಿಯಿಲ್ಲ. ಭಾಷೆಯ ಅವನತಿಯ ಅಪಾಯಗಳ ಕುರಿತು ಆಳವಾದ ತಿಳುವಳಿಕೆ ಇಲ್ಲದಿರುವುದೇ ಇದಕ್ಕೆ ಪ್ರಮುಖ ಕಾರಣ ಎಂದು ಅವರು ಹೇಳಿದರು.


ಡಾ. ಬಿಳಿಮಲೆಯವರು ಇಂದು ಜಗತ್ತಿನಾದ್ಯಂತ ಸುಮಾರು 7000 ಭಾಷೆಗಳನ್ನು ಜೀವಂತವಿರುವ ಸಣ್ಣ ಭಾಷೆಗಳೆಂದು ಗುರುತಿಸಲಾಗಿದೆ ಎಂದರು. ಇದರಲ್ಲಿ ಸುಮಾರು 3700 ರಷ್ಟು ಭಾಷೆಗಳು ಭಾರತದಲ್ಲಿಯೇ ಇವೆ. ಯುನೆಸ್ಕೋವು ಸಿದ್ಧಪಡಿಸಿದ ‘ಭಾಷೆಗಳ ಜಾಗತಿಕ ಭೂಪಟ’ವು ಭಾರತದಲ್ಲಿನ 172 ಭಾಷೆಗಳನ್ನು ಅಪಾಯದ ಅಂಚಿನಲ್ಲಿರುವ ಭಾಷೆಗಳೆಂದೂ, ಅದರಲ್ಲಿ 101 ಭಾಷೆಗಳನ್ನು ಅತೀವ ಅಪಾಯದಲ್ಲಿರುವ ಭಾಷೆಗಳೆಂದೂ 71 ಭಾಷೆಗಳನ್ನು ಎಲ್ಲ ಬಗೆಯ ಅಪಾಯಗಳಿಗೆ ಬಲಿಯಾಗುತ್ತಿರುವ ಭಾಷೆಗಳೆಂದೂ ಗುರುತಿಸಿದೆ. ಈ ಸಣ್ಣ ಭಾಷೆಗಳನ್ನಾಡುವ ಜನರಲ್ಲಿಯೂ ತಮ್ಮ ಮಾತೃ ಭಾಷೆಗಳ ಬಗೆಗೆ ಅಭಿಮಾನ ಕಡಿಮೆಯಾಗಿ, ಇಂಗ್ಲಿಷಿನ ಮೇಲೆ ಮೋಹ ಹೆಚ್ಚಾಗುತ್ತಲಿದೆ. ಹೀಗೆ ಭಾರತದಲ್ಲಿ ಸುಮಾರು ಮೂರು ಕೋಟಿ ಅರುವತ್ತು ಲಕ್ಷ ಜನಗಳ ಮಾತೃ ಭಾಷೆಗಳು ಇಂದು ಪತನಮುಖಿಯಾಗಿವೆ. ಭಾಷಾವಾರು ಪ್ರಾಂತ್ಯಗಳ ರಚನೆಯಾದಾಗ ಪ್ರಾದೇಶಿಕ ಭಾಷೆಗಳಿಗೇನೋ ಮಹತ್ವ ಬಂದುವು, ಆದರೆ ಈ ಹಂತದಲ್ಲಿ ಪ್ರಾದೇಶಿಕ ಭಾಷೆಗಳ ಆಶ್ರಯದಲ್ಲಿರುವ, ಆದರೆ ಯಾವುದೇ ರಾಜ್ಯದ ಅಧಿಕೃತ ಭಾಷೆಗಳಲ್ಲದ ಸಣ್ಣ ಭಾಷೆಗಳು ತೀವ್ರ ಉಪೇಕ್ಷೆಗೆ ಒಳಗಾದುವು. ಸುಮಾರು ಒಂದು ಕೋಟಿ ಜನರಾಡುವ ತುಳುವನ್ನು ಕರ್ನಾಟಕ ರಾಜ್ಯವೇ ಇಂದಿನವರೆಗೆ ಅಧಿಕೃತ ಭಾಷೆಯೆಂದೇ ಘೋಷಿಸಿಲ್ಲವಲ್ಲ! ಕೇಂದ್ರ ಸರಕಾರವೂ ಈ ಭಾಷೆಯನ್ನು ಎಂಟನೇ ಪರಿಚ್ಛೇದಕ್ಕೆ ಸೇರಿಸಲು ಸಂಕೋಚ ಪಡುತ್ತಿದೆ. ಈ ಸಣ್ಣ ಭಾಷೆಗಳನ್ನು ಆಯಾ ರಾಜ್ಯ ಸರಕಾರಗಳು ತಮ್ಮ ರಾಜ್ಯದ ಅಧಿಕೃತ ಭಾಷೆಯೆಂದು ಇದುವರೆಗೂ ಘೋಷಿಸಿಲ್ಲ. ಈ ನಡುವೆ ಭಾಷೆಯ ಕುರಿತು ಹೆಚ್ಚು ತಿಳುವಳಿಕೆ ಮೂಡುತ್ತಿದ್ದಂತೆ ಎಂಟನೇ ಪರಿಚ್ಛೇದಕ್ಕೆ ಸೇರಿಸಬೇಕೆಂದು ಬೇಡಿಕೆ ಇಟ್ಟ ಭಾಷೆಗಳ ಪಟ್ಟಿ ಉದ್ದವಾಗುತ್ತಿದೆ. ಕೇಂದ್ರ ಸರಕಾರ ಇದಕ್ಕೆ ಇವತ್ತಲ್ಲ ನಾಳೆ ಉತ್ತರಿಸಲೇ ಬೇಕಾಗುತ್ತದೆ. ಇಂದು ಸಣ್ಣ ಭಾಷೆಗಳ ಅಭಿವೃದ್ಧಿಯ ಕುರಿತು ರಾಜ್ಯ ಸರಕಾರವಾಗಲೀ ಕೇಂದ್ರ ಸರಕಾರವಾಗಲೀ ಗಂಭೀರವಾಗಿ ಯೋಚಿಸುತ್ತಿಲ್ಲ. ಜನರು ತಾವಾಗಿಯೇ ಧ್ವನಿ ಎರಿಸಿದರೆ, ಅದನ್ನು ಜಾಣತನದಿಂದ ಅಡಗಿಸಲಾಗುತ್ತಿದೆ. ರಾಜಕೀಯವಾಗಿ ಪ್ರಬಲವಾಗಿರುವ ಜನರ ಭಾಷೆಗಳು ಎಲ್ಲ ಸವಲತ್ತುಗಳನ್ನೂ ಪಡೆದುಕೊಳ್ಳುತ್ತಿವೆ. ದುರ್ಬಲರ ಭಾಷೆಗಳು ವಿನಾಶದತ್ತ ಚಲಿಸುತ್ತಿವೆ. ಆದುದರಿಂದ ಭಾರತಕ್ಕೊಂದು ಭಾಷಾ ನೀತಿ ರೂಪಿಸಿಕೊಳ್ಳಬೇಕಾದ್ದು ಇಂದಿನ ಅಗತ್ಯ ಎಂದು ಅವರು ಹೇಳಿದರು. ಅ

***ಚಂದ್ರಶೇಖರ್ ಎನ್ ಪಿ.***



## ರಾಷ್ಟ್ರೀಯ ಜಾನಪದ ವಿಶ್ವವಿದ್ಯಾಲಯ ಸ್ಥಾಪಿಸುವ ಅಗತ್ಯವಿದೆ- ಡಾ. ಬಿಳಿಮಲೆ

ಕೇಂದ್ರ ಸಾಹಿತ್ಯ ಅಕಾಡೆಮಿಯು ದಿನಾಂಕ 14.2.2018ರಂದು ಆಯೋಜಿಸಿದ್ದ " ಆದಿವಾಸಿ ಭಾಷೆಗಳು ಮತ್ತು ಮೌಖಿಕ ವಾಚಿಕೆಗಳು" ವಿಷಯ ಕುರಿತೆ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ.ಬಿಳಿಮಲೆ ಅವರು ಇಂದಿನ ದಿನಗಳಲ್ಲಿ ಜಾನಪದ ಸಂಸ್ಕೃತಿ ಮತ್ತು ಜನಪದ ದೈವಗಳನ್ನು ಕುರಿತು ಆಳವಾದ ಅಧ್ಯಯನ ಕೈಗೊಂಡು ಜನಸಾಮಾನ್ಯರಿಗೆ ನಮ್ಮ ಜಾನಪದ ಪರಂಪರೆಯ ಬಗ್ಗೆ ಸ್ಪಷ್ಟ ಅರಿವು ಮೂಡಿಸುವ ಅಗತ್ಯವಿದೆ. ಇಂತಹ ತಿಳುವಳಿಕೆಯ ಕೊರತೆಯಿಂದಾಗಿ ಸಾಕಷ್ಟು ಸಂದರ್ಭಗಳಲ್ಲಿ  ಪ್ರಬಲ ಸಮುದಾಯಗಳು ದುರ್ಬಲ ವರ್ಗಗಳ ದೈವ ಮತ್ತು ಅವರ ಆಚರಣೆಗಳನ್ನು ಕಾಲಕ್ರಮೇಣ ಅನ್ಯ ಅರ್ಥಗಳಲ್ಲಿ ಬಿಂಬಿಸುತ್ತಾ ಮತ್ತು ಹಲವು ಬಾರಿ ಹೊಸ ಹೊಸ ಅನ್ವೇಷಿತ ಕಥೆಗಳನ್ನು ಸೃಷ್ಟಿಸುತ್ತಾ ಮೂಲ ಜಾನಪದದ ಜ್ಞಾನವನ್ನು ವಿರೂಪಗೊಳಿಸುತ್ತಿರುವ ಅಪಾಯವಿದೆ. ಆದುದರಿಂದ ಕೇಂದ್ರ ಸರ್ಕಾರ ರಾಷ್ಟ್ರ ಮಟ್ಟದಲ್ಲಿ ಜಾನಪದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಮೂಲಕ ಇಡೀ ದೇಶದಲ್ಲಿಯೇ ವ್ಯಾಪಕವಾಗಿ ಹರಡಿರುವ, ತಲೆ ತಲೆಮಾರುಗಳಿಂದ ಸಮಾಜದ ರೀತಿ ನೀತಿಗಳನ್ನು ಒಪ್ಪಿ, ತಿದ್ದಿ, ತೀಡಿ ಇಂದಿಗೂ ಉಳಿದುಕೊಂಡು ಬಂದಿರುವ ಸಂಸ್ಕೃತಿ, ಆಚರಣೆ, ಕಲೆ, ಸಾಹಿತ್ಯಗಳ ಅಧ್ಯಯನಕ್ಕೆ ಕ್ರಮ ಕೈಗೊಳ್ಳಬೇಕೆಂದು ಅಭಿಪ್ರಾಯಪಟ್ಟರು. ಅ



## ಡಾ. ಚಂದ್ರಶೇಖರ ಕಂಬಾರ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಆಯ್ಕೆ

ಕನ್ನಡದ ಪ್ರಸಿದ್ಧ ಸಾಹಿತಿ ಡಾ. ಚಂದ್ರಶೇಖರ ಕಂಬಾರ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅವರು ಕವಿ, ನಾಟಕಕಾರ, ಜಾನಪದ ತಜ್ಞ, ಚಿತ್ರ ನಿರ್ದೇಶಕ ಹಾಗೂ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸ್ಥಾಪಕ ಕುಲಪತಿಯಾಗಿ ಪ್ರಸಿದ್ಧರಾಗಿದ್ದಾರೆ. ಉತ್ತರ ಕರ್ನಾಟಕದ ಜಾನಪದ ಮತ್ತು ಭಾಷೆಯ ಸೊಗಡನ್ನು ಅವರು ತಮ್ಮ ನಾಟಕಗಳಲ್ಲಿ ಮತ್ತು ಕಾವ್ಯಗಳಲ್ಲಿ ಪರಿಣಾಮಕಾರಿಯಾಗಿ ಬಳಸಿದ್ದಾರೆ. ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿ, ದೆಹಲಿ ನ್ಯಾಶನಲ್ ಸ್ಕೂಲ್ ಆಫ್ ಡ್ರಾಮಾ ಸೊಸೈಟಿಯ ಅಧ್ಯಕ್ಷರೂ ಆಗಿದ್ದರು. ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಸ್ವಲ್ಪ ಸಮಯ ಉಪನ್ಯಾಸಕರಾಗಿದ್ದ ಅವರು ಎರಡು ದಶಕಗಳಿಗಿಂತಲೂ ಹೆಚ್ಚು ಕಾಲ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಅವರು 25 ನಾಟಕಗಳು, 11 ಕವನ ಸಂಕಲನಗಳು, ಐದು ಕಾದಂಬರಿಗಳೂ, 16 ಸಂಶೋಧನ ಕೃತಿಗಳನ್ನು ರಚಿಸಿದ್ದಾರೆ. ಅಲ್ಲದೇ ರಂಗಭೂಮಿ, ಸಾಹಿತ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಹಲವಾರು ವಿದ್ವತ್‌ಪೂರ್ಣ ಬರಹಳಗಳನ್ನು ಪ್ರಕಟಿಸಿದ್ದಾರೆ. ಅವರ ನಾಟಕಗಳು ಹಲವು ಭಾರತೀಯ ಭಾಷೆಗಳಲ್ಲಿ ಮತ್ತು ಇಂಗ್ಲಿಷಿಗೆ ಅನುವಾದಗೊಂಡಿವೆ. ದೇಶ ವಿದೇಶಗಳಲ್ಲಿ ಪ್ರದರ್ಶನಗೊಂಡಿವೆ. ಐದು ಚಲನಚಿತ್ರಗಳನ್ನು ನಿರ್ದೇಶಿಸಿರುವ ಅವರಿಗೆ ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿಗಳು ದೊರೆತಿವೆ. ಅವರು ಭಾರತ ಸರಕಾರ ಮತ್ತು ಕರ್ನಾಟಕ ಸರಕಾರಕ್ಕೆ ಹಲವು ಸಾಕ್ಷ್ಯ ಚಿತ್ರಗಳನ್ನು ಕೂಡಾ ನಿದೇಶಿಸಿ ನೀಡಿದ್ದಾರೆ. ಭಾರತದ ಜಾನಪದ ಮತ್ತು ರಂಗಭೂಮಿಯ ಕುರಿತು ಅವರು ಹಲವಾರು ಪ್ರಬಂಧಗಳನ್ನು ದೇಶದ ಮತ್ತು ವಿದೇಶಗಳ ವಿಶ್ವವಿದ್ಯಾಲಯಗಳಲ್ಲಿ ಮಂಡಿಸಿದ್ದಾರೆ.

ಅವರಿಗೆ ಭಾರತ ಸರಕಾರದಿಂದ ಪದ್ಮಶ್ರೀ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಸಂಗೀತ ನಾಟಕ ಅಕಾಡೆಮಿ ಫೆಲೋಶಿಪ್, ಕಬೀರ್ ಸನ್ಮಾನ, ಕಾಳೀದಾಸ ಸನ್ಮಾನ್, ನಾಡೋಜ ಪ್ರಶಸ್ತಿ, ಪಂಪ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದ ಹಲವಾರು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಅ

***ಅಭಿಮತ ವರದಿ***



## ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ

# ಮುಂಬೈಯಲ್ಲಿ ಹೊರನಾಡ ಕನ್ನಡಿಗರ ರಾಷ್ಟ್ರೀಯ ಸಮಾವೇಶ

ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಮುಂಬೈಯಲ್ಲಿ ನಡೆದ ಎರಡು ದಿನಗಳ ಹೊರನಾಡ ಕನ್ನಡಿಗರ ಎರಡನೇ ರಾಷ್ಟ್ರೀಯ ಸಮಾವೇಶವನ್ನು ಇದೇ ಫೆಬ್ರವರಿ 10ರಂದು ಖ್ಯಾತ ಕಾದಂಬರಿಕಾರರಾದ ಡಾ. ಎಸ್.ಎಲ್. ಬೈರಪ್ಪ ಅವರು ಉದ್ಘಾಟಿಸಿದರು.

"ಹಳೆಯ ಮೈಸೂರು ಭಾಗದಲ್ಲಿ ಟಿಪ್ಪುವಿನ ಆಡಳಿತ ಕನ್ನಡಕ್ಕೆ ಆದ್ಯತೆ ನೀಡದೆ ಪರ್ಶಿಯನ್ ಭಾಷೆಯಲ್ಲಿಯೇ ಆಡಳಿತ ನಡೆಯುತ್ತಿತ್ತು. ಅನಂತರ ಬ್ರಿಟೀಷರ ಆಳ್ವಿಕೆಯಲ್ಲಿ ಇಂಗ್ಲಿಷ್ ಆ ಸ್ಥಾನಕ್ಕೆ ಏರಿತು. ಹಾಗಾಗಿ ಟಿಪ್ಪು ಕನ್ನಡ ವಿರೋಧಿಯಾಗಿದ್ದ" ಎಂದರು. "ಅಂದು ಅಸ್ತಿತ್ವದಲ್ಲಿದ್ದ ಜನಪ್ರತಿನಿಧಿ ಸಭೆಯಲ್ಲೂ ಕೂಡ ಕನ್ನಡಕ್ಕೆ ಆದ್ಯತೆ ಇರಲಿಲ್ಲ. ಆಗ ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರು ಮರಾಠಿ ಮಿಶ್ರಿತ ಕನ್ನಡ ಮಾತನಾಡುತ್ತಿದ್ದರು. ಆಗ ಡಿ.ವಿ. ಗುಂಡಪ್ಪನವರು ಕನ್ನಡ ಬಳಕೆಗಾಗಿ ಒಂದು ಸಮಿತಿಯನ್ನು ರಚಿಸಲು ನೀಡಿದ ಸಲಹೆ ಮೇರೆಗೆ ಸರ್ ಎಂ. ವಿಶ್ವೇಶ್ವರಯ್ಯನವರು ಕನ್ನಡ ಸಾಹಿತ್ಯ ಪರಿಷತ್‌ನ್ನು ಸ್ಥಾಪನೆ ಮಾಡಿದರು. ಅದರ ಮೊದಲ ಅಧ್ಯಕ್ಷರಾಗಿ ಹೆಚ್.ವಿ. ನಂಜುಂಡಯ್ಯನವರು ಮತ್ತು ಗೌರವ ಅಧ್ಯಕ್ಷರಾಗಿ ಮಹಾರಾಜರಾಗಿದ್ದ ಜಯಚಾಮರಾಜೇಂದ್ರ ಒಡೆಯರು ಕನ್ನಡಸಾಹಿತ್ಯ ಪರಿಷತ್ತನ್ನು ಮುನ್ನಡೆಸಿದರು. ಹಾಗಾಗಿ ಪರಿಷತ್ತನ್ನು ಸ್ಥಾಪಿಸಿದ್ದು ಮಹಾರಾಜರಲ್ಲ ಸರ್. ಎಂ. ವಿಶ್ವೇಶ್ವರಯ್ಯ" ಎಂದು ಹೇಳಿದರು.

ಈ ಕುರಿತು ಸಭೆಗೆ ಸ್ಪಷ್ಟನೆ ನೀಡಿದ ಪರಿಷತ್ತಿನ ಅಧ್ಯಕ್ಷರಾಗಿರುವ ಡಾ. ಮನು ಬಳಿಗಾರ್ ಅವರು ಯಾವುದೇ ಯೋಜನೆ ಜಾರಿಗೆ ಬಂದಾಗ ಅಂದಿನ ಆಡಳಿತದಲ್ಲಿರುವವರ ಹೆಸರಿನಿಂದ ಗುರುತಿಸುವುದು ರೂಢಿಯಾಗಿದ್ದು ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಯ ಪ್ರಸ್ತಾವನೆಯನ್ನು ಸರ್. ಎಂ. ವಿಶ್ವೇಶ್ವರಯ್ಯನವರು ಮುಂದಿಟ್ಟಾಗ ಮಹಾರಾಜರು ಅದನ್ನು ಒಪ್ಪಿ ಜಾರಿಗೆ ತರಲು ಮುಂದಾಗದಿದ್ದರೆ ಪರಿಷತ್ತು ಸ್ಥಾಪನೆಯಾಗುತ್ತಿರಲಿಲ್ಲ ಎಂದು ಸ್ಪಷ್ಟನೆ ನೀಡಿದರು.

ಎರಡು ದಿನಗಳ ಈ ರಾಷ್ಟ್ರೀಯ ಸಮಾವೇಶದಲ್ಲಿ ಅನೇಕ ಪ್ರಸಕ್ತ ಸಾಂಸ್ಕೃತಿಕ ಸಾಹಿತ್ಯಿಕ ವಿದ್ಯಮಾನಗಳು ಮತ್ತು ಸವಾಲುಗಳನ್ನು ಕುರಿತು ಚಿಂತನ ಮಂಥನ ನಡೆಸಲು ನಾಲ್ಕು ಗೋಷ್ಠಿಗಳನ್ನು ಆಯೋಜಿಸಲಾಗಿತ್ತು. ಮೊದಲನೆ ಗೋಷ್ಠಿಯಲ್ಲಿ– "ಮುಂಬಯಿ ಕನ್ನಡಿಗರು: ಸೃಜನಶೀಲ ನೆಲೆಗಳು' ಎಂಬ ವಿಷಯ ಕುರಿತಂತೆ ಡಾ. ಜಯಂತ ಕಾಯ್ಕಿಣಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು, ಡಾ. ಶ್ರೀನಿವಾಸ ಜೋಕಟ್ಟೆ, ಡಾ. ಮಮತಾ ರಾವ್ ಮತ್ತು ಡಾ. ಗಣೇಶ್ ಉಪಾಧ್ಯಾಯ ಅವರುಗಳು ಪ್ರಬಂಧ ಮಂಡನೆ ಮಾಡಿ ತಮ್ಮ ವಿಚಾರಗಳನ್ನು ಹಂಚಿಕೊಂಡರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಮುಂಬಯಿಯ ಶ್ರೀಮತಿ ಮಿತ್ರಾ ವೆಂಕಟರಾಜ್ ಮತ್ತು ಶ್ರೀ ಚಂದ್ರಶೇಖರ ಪಾಲತ್ತಾಡಿ ಅವರು ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು.



ಎರಡನೇ ಗೋಷ್ಠಿಯಲ್ಲಿ –"ಹೊರನಾಡ ಕನ್ನಡಿಗರ ಸವಾಲು– ಪರಿಹಾರ" ಕುರಿತ ವಿಷಯದ ಕುರಿತಂತೆ ಪ್ರೊ. ತೇಜಸ್ವಿ ಕಟ್ಟಿಮನಿ, ಇಂದಿರಾಗಾಂಧಿ ರಾಷ್ಟ್ರೀಯ ಬುಡಕಟ್ಟು ವಿಶ್ವವಿದ್ಯಾಲಯ, ಅಮರಕಂಟಕ, ಮಧ್ಯಪ್ರದೇಶ, ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರೊ. ಕೆ.ಬಿ. ತಾರಕೇಶ್ವರ, ಶ್ರೀ ಸದಾನಂದ ಕೋಟ್ಯಾನ್ ಮತ್ತು ಡಾ. ಚಂದ್ರಕಾಂತ ಪೋಕಳೆ ಅವರು ತಮ್ಮ ಚಿಂತನೆಗಳನ್ನು ಮಂಡಿಸಿದರು. ಡಾ. ಗುರುಲಿಂಗಪ್ಪ ಧಬಾಲೆ, ಶ್ರೀ ಬಿ.ವಿ. ವಿಠಲ್, ಶ್ರೀಮತಿ ಕಾಂತಿ ಶೆಟ್ಟಿ ಅವರು ಪ್ರತಿಕ್ರಿಯಿಸಿದರು.

ಮೊದಲನೆ ದಿನ ಖ್ಯಾತ ಹಿಂದೂಸ್ತಾನಿ ಗಾಯಕ ಡಾ. ಮೃತ್ಯುಂಜಯ ಶೆಟ್ಟರ್ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ಮತ್ತು ಶ್ರೀ ಗುರುನಾರಾಯಣ ಯಕ್ಷಗಾನ ಮಂಡಳಿ ಅವರಿಂದ ಯಕ್ಷಗಾನವು ಪ್ರದರ್ಶನಗೊಂಡಿತು.

ಎರಡನೇ ದಿನದ ಕಾರ್ಯಕ್ರಮ ಮೂರನೇ ಗೋಷ್ಠಿ, "ಹೊರನಾಡ ಕನ್ನಡಿಗರ ಭಾಷಾ ಬಿಕ್ಕಟ್ಟು–ಸಾಮರಸ್ಯ" ಕುರಿತ ವಿಷಯ ಕುರಿತಂತೆ ಪ್ರಾರಂಭವಾಯಿತು. ಗೋಷ್ಠಿಯಲ್ಲಿ ಭಾಗವಹಿಸಿ ಆಶಯ ನುಡಿಗಳನ್ನಾಡಿದ ದೆಹಲಿ ವಿಶ್ವವಿದ್ಯಾಲಯದ ನಿವೃತ್ತ ಅಧ್ಯಾಪಕರಾದ ಡಾ. ಟಿ. ಎಸ್. ಸತ್ಯನಾಥ್ ಅವರು ಇವೊತ್ತಿನ ಸಂದರ್ಭದಲ್ಲಿ ಭಾರತೀಯ ಭಾಷೆಗಳು ಸಾಕಷ್ಟು ಬಿಕ್ಕಟ್ಟನ್ನು ಎದುರಿಸುತ್ತಿವೆ. ಭಾಷಾ ಬಿಕ್ಕಟ್ಟು ಕೇವಲ ಕನ್ನಡ ಮಾತ್ರ ಎದುರಿಸುತ್ತಿರುವ ಸಮಸ್ಯೆಯಲ್ಲ. ಅದು ಜಾಗತೀಕರಣದ ಈ ದಿನಗಳಲ್ಲಿ ಇಡೀ ದೇಶದ ಹಾಗೂ ವಿಶ್ವದ ಎಲ್ಲ ಭಾಷಿಕರು ಕೂಡ ಎದುರಿಸುತ್ತಿರುವ ಸಮಸ್ಯೆಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ದರಾಮಯ್ಯನವರು ಮಾತನಾಡಿ ಹೊರನಾಡಿನಲ್ಲಿ ಕನ್ನಡ ಭಾಷಿಕರು ಎದುರಿಸುತ್ತಿರುವ ಭಾಷಾ ಬಿಕ್ಕಟ್ಟು ಕೇವಲ ಹೊರನಾಡಿನ ಕನ್ನಡಿಗರಿಗಷ್ಟೇ ಸೀಮಿತವಾಗಿಲ್ಲ ಅದು ಒಳನಾಡಿನ ಕನ್ನಡಿಗರ ಬಿಕ್ಕಟ್ಟೂ ಕೂಡ ಅದೇ ಆಗಿದ್ದು ಇವೊತ್ತಿನ ಸಂದರ್ಭದಲ್ಲಿ ಗೋವಾ, ಮುಂಬೈ, ಕರ್ನೂಲ್ ಮತ್ತು ಕಾಸರಗೋಡಿನಲ್ಲಿ ಇರುವ ಕನ್ನಡ ಮಾಧ್ಯಮ ಶಾಲೆಗಳನ್ನು ನೋಡಿದಾಗ, ಅಲ್ಲಿ

ಕನ್ನಡ ಭಾಷೆಯನ್ನು ಕಲಿಯಲು ತೋರುತ್ತಿರುವ ಆಸಕ್ತಿಯನ್ನು ಬೆಂಗಳೂರಿನ ಕನ್ನಡ ಶಾಲೆಗೆಳಲ್ಲಿ ನಾವು ಕಾಣಲು ಸಾಧ್ಯವಿಲ್ಲ. ಕನ್ನಡವನ್ನು ಒಂದು ಭಾಷೆಯಾಗಿ ಕಲಿಯುವುದಕ್ಕೆ ಬೆಂಗಳೂರಿನಲ್ಲಿರುವ ಶಾಲೆಗಳು ತೋರುತ್ತಿರುವ ಅಸಡ್ಡೆ ಕುರಿತು ಬೇಸರ ವ್ಯಕ್ತಪಡಿಸಿದರು.

ಗೋಷ್ಠಿಯಲ್ಲಿ ಹೊರನಾಡಿನ ಕನ್ನಡಿಗರ ಸ್ಥಳೀಯ ಬಿಕ್ಕಟ್ಟುಗಳನ್ನು ಕುರಿತು ವಿವಿಧ ಲೇಖಕರು ತಮ್ಮ ಪ್ರಬಂಧಗಳನ್ನು ಮಂಡಿಸಿದರು. ಡಾ.ರಾಮಕೃಷ್ಣ ಮರಾಠೆ ಅವರು ಕನ್ನಡ ಹಾಗೂ ಮರಾಠಿ, ಡಾ. ಶೇಷಶಾಸ್ತ್ರಿ ಅವರು ಕನ್ನಡ ಹಾಗೂ ತೆಲುಗು, ಡಾ.ವಿ. ಗೋಪಾಲಕೃಷ್ಣ ಅವರು ಕನ್ನಡ ಹಾಗೂ ತಮಿಳು ಭಾಷೆಗಳ ಕುರಿತಂತೆ ತಮ್ಮ ವಿಚಾರಗಳನ್ನು ಮಂಡಿಸಿದರು. ಅನಂತರ ಡಾ. ಕೆ,ಶಾರದ, ಶ್ರೀ ಶಿವರಾಮ ಕಾಸರಗೋಡು, ಶ್ರೀ ಮಲ್ಲಿಕಾರ್ಜುನ ಬಾದಾಮಿ ಅವರು ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ನಾಲ್ಕನೇ ಗೋಷ್ಠಿ –"ಹೊಸ ಶಿಕ್ಷಣ ನೀತಿ" ಕುರಿತ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಡಾ. ಹೆಚ್. ಎಂ. ಮಹೇಶ್ವರಯ್ಯ ಅವರು ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತು ಮಾತನಾಡಿ ಕಳೆದ ಮೂರು ವರ್ಷಗಳಲ್ಲಿ ಸಾವಿರಾರು ಸಂಖ್ಯೆಯ ಸಭೆಯಲ್ಲಿ ನಡೆದಿದ್ದು ಕರ್ನಾಟಕದ ಶಿಕ್ಷಣ ಮಂತ್ರಿಗಳು ಒಮ್ಮೆಯೂ ಕೂಡ ಅಂತಹ ಸಭೆಗಳಲ್ಲಿ ಭಾಗವಹಿಸಿಲ್ಲ. ಶಿಕ್ಷಣ ನೀತಿಯನ್ನು ಕುರಿತು ರಾಷ್ಟ್ರಾದ್ಯಂತ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಕರ್ನಾಟಕದ ನಿಲುವು ಏನು ಎಂಬುದನ್ನು ವ್ಯಕ್ತಪಡಿಸಲು ನಮ್ಮ ಶಿಕ್ಕಣ ಇಲಾಖೆಯ ಮಂತ್ರಿಗಳು ಭಾಗವಹಿಸಿ ಮಾತೃಭಾಷೆಯಲ್ಲಿಯೇ ಶಿಕ್ಷಣ ನೀಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸದಿರುವುದು ವಿಷಾದನೀಯ ಎಂದರು. ಗೋಷ್ಠಿಯಲ್ಲಿ ಹಿರಿಯ ನ್ಯಾಯವಾದಿಗಳಾದ ಶ್ರೀಮತಿ ಹೇಮಲತ ಮಹಿಷಿ, ಪ್ರಾಧ್ಯಾಪಕರಾದ ಡಾ. ಶಿವರಾಮ ಪಡಿಕ್ಕಲ್, ಡಾ. ಕೆ.ವೈ. ನಾರಾಯಣಸ್ವಾಮಿ, ಡಾ. ಕೆ.ಆರ್. ದುರ್ಗಾದಾಸ್, ಅವರು ಪ್ರಬಂಧ ಮಂಡಿಸಿದರು. ಅನಂತರ ಶ್ರೀ ತಿಮ್ಮಯ್ಯ, ಹಾಗೂ ಡಾ. ಅಪ್ಪಗೆರೆ ಸೋಮಶೇಖರ ಅವರು ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ಅನಂತರ ನಡೆದ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದ ರಂಗರಾಜ ವನದುರ್ಗ ಅವರು ಮಾತನಾಡಿ ಕವಿ ಮನಸ್ಸಿರುವ ಪ್ರತಿಯೊಬ್ಬರಿಗೂ ಭಾರತದ ಮೂಲ ಗುಣಗಳಾದ ಜಾತ್ಯತೀತತೆ, ಸಮಗ್ರತೆ ಹಾಗೂ ದೇಶದ ಬಹುತ್ವದ ಕುರಿತಂತೆ ಅಪಾರ ನಂಬಿಕೆಯಿರುತ್ತದೆ. ಅಂತಹವರು ಮಾತ್ರ ಉತ್ತಮ ಕವಿಗಳಾಗಬಲ್ಲರು ಎಂದರು. ಮುಂಬೈನ ಸ್ಥಳೀಯ ಕಲಾವಿದರು, ಹಾಗೂ ಮೊಗವೀರ ಶಾಲೆಯ ಕನ್ನಡ ಮಕ್ಕಳಿಂದ ಪುಣ್ಯಕೋಟಿ ನಾಟಕ ಮತ್ತು ಚೆಂಬೂರು ಕನ್ನಡ ಸಂಘದ ಕನ್ನಡ ಶಾಲಾ ಮಕ್ಕಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಬಹಳ ಚೆನ್ನಾಗಿ ಮೂಡಿಬಂದವು ಮತ್ತು ಸಮಾರಂಭದ ಆಕರ್ಷಣೆಯನ್ನು ಇಮ್ಮಡಿಗೊಳಿಸಿದವು.

ಮುಂಬೈನ ಮೊಗವೀರ ಭವನದಲ್ಲಿ ನಡೆದ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ. ಮನುಬಳಿಗಾರ್ ಅವರು ಕನ್ನಡ ಮತ್ತು ಕನ್ನಡ ಸಾಹಿತ್ಯ ಸಿದ್ಧಾಂತ ಯಾವುದೇ ಇದ್ದಿರಲಿ, ಅದು ವಿವಿಧ ರೂಪಗಳಲ್ಲಿ ಅಭಿವ್ಯಕ್ತಿ ಪಡೆಯಬೇಕು. ಇವನಾರವ ಇವನಾರವನೆಂದೆನಿಸದಿರಯ್ಯ, ಕನ್ನಡ ಎಲ್ಲ ಕಾಲಕ್ಕೂ ವಸುದೈವ ಕುಟುಂಬಕಂ ಎಂಬ ತತ್ವವನ್ನು ಪರಿಪಾಲಿಸಿಕೊಂದು ಬಂದಿದೆ ಎಂಬುದಕ್ಕೆ "ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ" ಎಂದು ಸಾರಿದ ಬಸವಣ್ಣನವರು "ಮನುಜ ಮತ ವಿಶ್ವಪಥ" ತತ್ವ ಪ್ರತಿಪಾದಿಸಿದ ಕುವೆಂಪು ಅವರಂತಹ ಚಿಂತನೆಗಳೇ ಸಾಕ್ಷಿ. ಇಂತಹ ಸಮಾವೇಶಗಳಿಂದ ಕನ್ನಡದ ಬೇರುಗಳು ಗಟ್ಟಿಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಹೊರನಾಡಿನಲ್ಲಿರುವ ಕನ್ನಡಿಗರ ಮಕ್ಕಳಿಗೂ ಕರ್ನಾಟಕದಲ್ಲಿ ಉದ್ಯೋಗ ಗಳಿಸಲು ಅನುಕೂಲವಾಗುವಂತೆ ರಾಜ್ಯ ಸರ್ಕಾರ ಶೇಕಡ 5ರಷ್ಟು ಮೀಸಲಾತಿ ನೀಡುವ ಮೂಲಕ ಹೊರನಾಡಿನ ಕನ್ನಡಿಗರು ಕನ್ನಡ ಕಲಿಯಲು ಪ್ರೋತ್ಸಾಹಿಸುತ್ತಿದೆ. ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದರು.

ಸಮಾರೋಪ ಭಾಷಣ ಮಾಡಿದ ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಹಾಗೂ ಸಂಸ್ಕೃತಿ ಚಿಂತಕರೂ ಆದ ಡಾ. ಮೋಹನ್ ಆಳ್ವಾ ಅವರು "ಕನ್ನಡ ಶಾಲೆಗಳು ಮುಚ್ಚಿದರೆ ಅದು ಶ್ರೀ ಸಾಮಾನ್ಯ ಕನ್ನಡಿಗರ ಸೋಲು, ಹಳ್ಳಿಯ ಸೋಲು ಮತ್ತು ನಮ್ಮ ಮಣ್ಣಿನ ಸೋಲಾಗುತ್ತದೆ ಆದ್ದರಿಂದ ಅದಕ್ಕೆ ಅವಕಾಶ ನೀಡದೆ ನಮ್ಮ ಕನ್ನಡ ಶಾಲೆಗಳನ್ನು ಉಳಿಸುವ ಕೆಲಸ ಮಾಡುವ ಅಗತ್ಯವಿದೆ ಎಂದರು. ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಮಾತ್ರವಲ್ಲ ಕೊಲ್ಲಿ ರಾಷ್ಟ್ರಗಳೂ ಸೇರಿದಂತೆ ಜಗತ್ತಿ ಹಲವಾರು ದೇಶಗಳಲ್ಲಿ ಕನ್ನಡ ಜೀವಂತವಾಗಿದೆ. ಕನ್ನಡ ಭಾಷೆ ಸಾಹಿತಿಗಳ ಭಾಷೆ ಮಾತ್ರವಷ್ಟೇ ಅಲ್ಲ ಇದು ಜನಸಾಮಾನ್ಯರ ಭಾಷೆಯಾಗಿ ಸದಾ ಜೀವಂತವಾಗಿರುವ ಭಾಷೆಯಾಗಿದೆ ಎಂದರು.

ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿದ್ದ ಕನ್ನಡ ವಿಶ್ವ ವಿದ್ಯಾಲಯದ ಉಪಕುಲಪತಿಗಳಾದ ಡಾ. ಮಲ್ಲಿಕಾ ಘಂಟಿ ಅವರು "ಜಗತ್ತನ್ನು ಇಂದು ಭಾಷೆ ಮತ್ತು ಬಣ್ಣಗಳು ಆಳುತ್ತಿವೆ. ಭಾಷೆ ಇಡೀ ಮನುಕುಲವನ್ನು ಒಂದುಗೂಡಿಸಿದರೆ ಬಣ್ಣ / ಜಾತಿ ಸಮಾಜವನ್ನು ವಿಂಗಡಿಸುತ್ತಿದೆ. ದೂರದೃಷ್ಟಿಯುಳ್ಳ ವಿದ್ಯಾವಂತರು ಇಂತಹ ಸಂದಿಗ್ಧತೆಗಳಿಂದ ಬಿಡಿಸಿಕೊಂಡು ಸಮಾಜದ ಮೇಲೆ ಆಗುತ್ತಿರುವ ಅಪಾಯಗಳನ್ನು ತಪ್ಪಿಸಲು ಚಿಂತನೆ ನಡೆಸಬೇಕು. ಹೊರನಾಡು ಕನ್ನಡಿಗರ ಸಮಾವೇಶಗಳಂತಹ ಕಾರ್ಯಕ್ರಮಗಳ ಮೂಲಕ ಭಾವನಾತ್ಮಕವಾಗಿ ಜನತೆಯನ್ನು ಒಂದಾಗಿಸುವ ಕೆಲಸ ಮಾಡಬೇಕೆಂದು" ಅಭಿಪ್ರಾಯಪಟ್ಟರು. ಮುಂಬೈಯಲ್ಲಿ ನಡೆದ ಈ ಬಾರಿಯ ಎರಡನೇ ರಾಷ್ಟ್ರೀಯ ಸಮ್ಮೇಳನಕ್ಕೆ ಸುಮಾರು ಹನ್ನೆರಡು ರಾಜ್ಯಗಳಿಂದ ಆಗಮಿಸಿದ್ದ ಕನ್ನಡಿಗರು ಸಾಕ್ಷಿಯಾದರು. ಅ




## ಕನ್ನಡಿಗರು ಎಂದರೆ ಸೃಜನಶೀಲರು

ಕನ್ನಡಿಗರು ಎನ್ನುವುದರ ಇನ್ನೊಂದು ಅರ್ಥವೇ ಸೃಜನಶೀಲರು ಎಂದು ಮುಂಬೈಯಲ್ಲಿ ನಡೆದ 'ಹೊರನಾಡ ಕನ್ನಡಿಗರ ದ್ವಿತೀಯ ರಾಷ್ಟ್ರೀಯ ಸಮಾವೇಶದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ನುಡಿದರು. 'ಮುಂಬೈ ಕನ್ನಡಿಗರು: ಸೃಜನಶೀಲ ನೆಲೆಗಳು' ಎನ್ನುವ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿ, ಮುಂಬೈಯಲ್ಲಿ ಕನ್ನಡಿಗರ ಸೃಜನಶೀಲ ನೆಲೆಗಳು ಗಟ್ಟಿಯಾಗಲು ಅಥವಾ ಗಟ್ಟಿಗೊಳ್ಳಲು ಮುಂಬೈಯ ಕನ್ನಡದ ವಿವಿಧ ಸಂಘ ಸಂಸ್ಥೆಗಳ ಕೊಡುಗೆ ಅಪಾರವಾಗಿದೆ ಎಂದರು. ರಂಗಕರ್ಮಿಗಳಿಗೆ, ಸಾಹಿತ್ಯ ವಿದ್ಯಾರ್ಥಿಗಳಿಗೆ ಈ ಸಂಸ್ಥೆಗಳು ನಿರಂತರವಾಗಿ ವೇದಿಕೆ ನೀಡಿ ಅವಕಾಶ ಕಲ್ಪಿಸಿ, ಆ ಪ್ರತಿಭೆಗಳು ಬೆಳಕಿಗೆ ಬರಲು ಮೂಲ ಕಾರಣಕರ್ತರೆಂದರು.

ಮುಂಬೈಯ ಒಳಗಡೆ ಒಂದು 'ಮಿನಿ ಕರ್ನಾಟಕ'ವೇ ಇದೆ. ಇಲ್ಲಿ ಕರ್ನಾಟಕದ ಪ್ರದರ್ಶನ ಕತೆಗಳು, ಚಲನಚಿತ್ರ, ರಂಗಭೂಮಿ ಮತ್ತು ಕನ್ನಡ ಸಾಹಿತ್ಯ ಚಟುವಟಿಕೆಗಳು ಕರ್ನಾಟಕದ ಹಾಗೆ ನಿರಂತರವಾಗಿ ನಡೆಯುತ್ತಿದೆ. ಈ ಎಲ್ಲಾ ಕ್ಷೇತ್ರಗಳಲ್ಲಿ ಕನ್ನಡದ ಜೊತೆಗೆ ಮರಾಠಿ, ಹಿಂದಿ, ಇಂಗ್ಲಿಷ್ ಹಾಗೂ ಭಾರತೀಯ ಮತ್ತು ವಿದೇಶಿ ಭಾಷೆಗಳಲ್ಲಿ ರಾಷ್ಟ್ರೀಯ ಮತ್ತು ಅಂರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯನ್ನು ಪಡೆದ ಮುಂಬೈ ಕನ್ನಡಿಗರು, ಚಲನಚಿತ್ರ ನಟ–ನಟಿಯರು, ಸಾಹಿತಿಗಳು, ರಂಗಕರ್ಮಿಗಳು ಇದ್ದಾರೆ ಎಂದು ವಸಂತ ಶೆಟ್ಟಿ ಬೆಳ್ಳಾರೆ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಪ್ರಥಮ ಹೊರನಾಡ ಕನ್ನಡಿಗರ ಸಮಾವೇಶವನ್ನು 2016ರಲ್ಲಿ ದೆಹಲಿ ಕರ್ನಾಟಕದ ಸಂಘ ವ್ಯವಸ್ಥಿತವಾಗಿ ಆಯೋಜಿಸಿತ್ತು ಎಂದು ನೆನಪಿಸಿಕೊಂಡರು. ಅ



# ದಾಸಶ್ರೇಷ್ಠ ಕನಕದಾಸರ 530ನೇ ರಾಷ್ಟ್ರೀಯ ಜಯಂತೋತ್ಸವ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ, ದೆಹಲಿ ಇವರ ವತಿಯಿಂದ 'ದಾಸಶ್ರೇಷ್ಠ ಕನಕದಾಸರ 530ನೇ ಕನಕ ಜಯಂತೋತ್ಸವ'ವನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಇದೇ ಫೆಬ್ರವರಿ 25ರಂದು ಅದ್ಧೂರಿಯಾಗಿ ನೆರವೇರಿಸಲಾಯಿತು. ಬೆಳಿಗ್ಗೆ ದಾಸ ಶ್ರೇಷ್ಠ ಶ್ರೀ ಕನಕದಾಸರ ಭಾವಚಿತ್ರದ ಮೆರವಣಿಗೆ ವಿವಿಧ ಕಲಾತಂಡಗಳ ಪ್ರದರ್ಶನದೊಂದಿಗೆ ಪೂರ್ಣಕುಂಭ ಹೊತ್ತ ವನಿತೆಯರ ಸಹಿತ ಶ್ರೀ ರಾಘವೇಂದ್ರ ಸ್ವಾಮಿ ಮಠದಿಂದ ಹೊರಟು ಸಂಘದ ಸಭಾಂಗಣಕ್ಕೆ ತಲುಪಿತು. ಶ್ರೀ ಬಿ.ಎಸ್. ಶಿವಣ್ಣ, ಪ್ರಧಾನ ಕಾರ್ಯದರ್ಶಿ, ಕೆ.ಪಿ.ಸಿ.ಸಿ., ರಾಜ್ಯಾಧ್ಯಕ್ಷರು, ಡಾ. ರಾಮಮನೋಹರ ಲೋಹಿಯಾ ವಿಚಾರ ವೇದಿಕೆ, ಬೆಂಗಳೂರು ಇವರು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರೊಂದಿಗೆ ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಂಘದ ಗೌರವ ಅಧ್ಯಕ್ಷರಾದ ಡಾ. ಬಿ. ಮುನಿರಾಜು ಅವರು ಉಪಸ್ಥಿತರನ್ನು ಸ್ವಾಗತ ಬಯಸುತ್ತಾ ಕಾರ್ಯಕ್ರಮದ ಉದ್ದೇಶವನ್ನು ಸಭೆಗೆ ತಿಳಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಇಂದು ದೆಹಲಿಯಲ್ಲಿ ಕನಕ ಜಯಂತೋತ್ಸವ ಆಚರಿಸುತ್ತಿರುವುದು ಕನ್ನಡಿಗರೆಲ್ಲರಿಗೂ ಅಭಿಮಾನದ ಸಂಗತಿ, ಕಾರಣ ಇಲ್ಲಿಯವರೆಗೂ ಕನಕದಾಸರು ಕೇವಲ ಕರ್ನಾಟಕಕ್ಕೆ ಸೀಮಿತರಾಗಿದ್ದು ಇಂದು ಅವರನ್ನು ಹಾಗೂ ಅವರ ವಿಚಾರಧಾರೆಗಳನ್ನು ಕರ್ನಾಟಕದ ಗಡಿಯಿಂದ ಹೊರಗೆ ಇಡೀ ದೇಶ ಹಾಗೂ ವಿಶ್ವಕ್ಕೆ ಪರಿಚಯಿಸುವ ಅವಶ್ಯಕತೆ ಇದೆ. ಇದನ್ನರಿತು ದೆಹಲಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದವರು ಈ ಕಾರ್ಯಕ್ರಮ ಆಯೋಜಿಸಿರುವುದು ಪ್ರಶಂಸನೀಯ. ಕನಕದಾಸರ ವಿಚಾರಧಾರೆ ಮನುಕುಲದ ಏಳಿಗೆಗಾಗಿ ಇಂದಿಗೂ ಪ್ರಸ್ತುತ. ನಮ್ಮ ಸಮಾಜದ ಜನರು ಅವರು ಹಾಕಿಕೊಟ್ಟ ಮಾರ್ಗವನ್ನು ಅನುಸರಿಸಿ ಸಮಾಜ ಹಾಗೂ ಇಡೀ ಮಾನವ ಸಂಕುಲದ ಅಭಿವೃದ್ಧಿಗಾಗಿ ನಾವೆಲ್ಲರೂ ಒಗ್ಗಟ್ಟಾಗಿ ಶ್ರಮಿಸೋಣ ಎಂದು ತಮ್ಮ ವಿಚಾರ ಮಂಡಿಸಿದರು.

ದೆಹಲಿ ವಿಶ್ವವಿದ್ಯಾಲಯದ ಸಂಶೋಧಕ ಶ್ರೀ ಸಂಗಪ್ಪ ವಗ್ಗರ ಅವರು ತಳವರ್ಗಗಳ ಸಾಮಾಜಿಕ ಸಮಾನತೆಗಾಗಿ ಕನಕದಾಸರ ಹೋರಾಟದ ವಿಚಾರಗಳ ಪ್ರಸ್ತುತತೆ ಬಗ್ಗೆ ತಿಳಿಸಿದರು. ಕನಕದಾಸರು ಅವರ ಜೀವನದುದ್ದಕ್ಕೂ ತಳವರ್ಗಗಳ ಸ್ವಾತಂತ್ರ್ಯ, ಸಮಾನತೆಗಾಗಿ ಹೋರಾಡಿಕೊಂಡು ಬಂದರು. ಅವರ ಕೀರ್ತನೆ, ತತ್ವಪದಗಳ ಮೂಲಕ ಧಾರ್ಮಿಕ, ಆರ್ಥಿಕ, ಬೌದ್ಧಿಕವಾಗಿ ಸಮಾಜವನ್ನು ತಿದ್ದುವ ಕೆಲಸ ಮಾಡುವ ಮೂಲಕ ಕೆಳ ಜಾತಿ, ವರ್ಗಗಳಿಗೆ ನ್ಯಾಯ ಕೊಡಿಸುವ ಕಾರ್ಯವನ್ನು 16ನೇಯ ಶತಮಾನದಲ್ಲಿ ಕೈಗೊಂಡಿದ್ದರೂ ಕನಕರು ಕಂಡುಕೊಂಡ ಸಾಮಾಜಿಕ ನ್ಯಾಯದ ಕಲ್ಪನೆ ಇಂದಿಗೂ ಪ್ರಸ್ತುತವಾಗಿದೆ ಎಂಬ ವಿಚಾರಗಳ ಬಗ್ಗೆ ವೈಚಾರಿಕವಾಗಿ ಮಾತನಾಡಿದರು.

ತುಮಕೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಪರಶುರಾಮ ಕೆ.ಜಿ.ಯವರು ಕನಕದಾಸದರ ಬಗ್ಗೆ ಸಮ ಸಮಾಜದ ಪರಿಕಲ್ಪನೆಯೊಂದಿಗೆ ವಿಚಾರ ವಿನಿಮಯ ಮಾಡಿಕೊಂಡರು. ಅವರು ಕನಕದಾಸರು ಕಂಡ ಸಮರ್ಥ ಪರಿಕಲ್ಪನೆ ಕುರಿತು ಮಾತನಾಡುತ್ತಾ, ಕನಕರು 16ನೇ ಶತಮಾನದಲ್ಲಿದ್ದ ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ ಇಂದಿನ ಸಮಾಜದಲ್ಲೂ ಹಾಗೆ ಮುಂದುವರೆದಿದೆ. ಕನಕರು ಹಾಕಿಕೊಟ್ಟ ಸಹಬಾಳ್ವೆ, ಸಮಾನತೆ, ತಾರತಮ್ಯತೆ ಸಂಪೂರ್ಣವಾಗಿ ಅಳಿಸಿಲ್ಲ ಹಾಗೂ ಇಂದಿಗೂ ಮೇಲು ಜಾತಿಯ ಪಟ್ಟಭದ್ರ ಶಕ್ತಿಗಳು, ಹಿಂದುಳಿದ ಜನರನ್ನು ಶೋಷಣೆಗೆ ಒಳಪಡಿಸಿವೆ. ಕನಕದಾಸರಂತಹ ಮಹಾಪುರುಷರು ಬಂದು ಈ ಸಮಾಜದ ಅಂಕುಡೊಂಕನ್ನು ತಿದ್ದುವ ಪ್ರಯತ್ನ ಮಾಡಿದ್ದರೂ ಸಹ ಕನಕದಾಸರ ಸಮ-ಸಮಾಜದ ಪರಿಕಲ್ಪನೆ ಸಾಕರವಾಗಲು ತಳ ವರ್ಗದ ಜನರಲ್ಲಿ ಶಿಕ್ಷಣ, ಸಂಘಟನೆಯ ಅರಿವು ಮೂಡಿದರೆ ಮಾತ್ರ ಸಮ-ಸಮಾಜ ಸಾಧ್ಯ ಎಂದು ಒತ್ತುಕೊಟ್ಟು ಹೇಳಿದರು.

ಈ ಕಾರ್ಯಕ್ರಮದಲ್ಲಿ ದೇಶದ ವಿವಿಧ ರಾಜ್ಯಗಳಿಂದ ಹಾಲುಮತ ಮಹಾಸಭಾ, ಕರ್ನಾಟಕ, ಅಖಿಲ ಭಾರತ್ ಧನ್ಗರ್ ಸಮಾಜ್ ಸಂಘಟನ್, ಮಹಾರಾಷ್ಟ್ರ, ಅಖಿಲ ಭಾರತ್ ಪಾಲ್ ಮಹಾಸಭಾ, ದೆಹಲಿ, ಪಾಲ್ ಭಗೇಲ್ ಸಂಘಟನ್, ಗುರ್‌ಗ್ರಾಮ, ಕುರುಮ ಸಂಘ, ಆಂಧ್ರಪ್ರದೇಶ ಮತ್ತು ತೆಲಂಗಾಣ, ಹೈದರಾಬಾದ್, ಕುರುಬ/ಕುರಮನ್/ಕುರುಂಬರ್ ಸಂಘಂ, ತಮಿಳುನಾಡು, ಕರ್ನಾಟಕ ಪ್ರದೇಶ ಕುರುಬರ ಸಂಘ, ಬೆಂಗಳೂರು ಹಾಗೂ ಬೀದರ್ ಜಿಲ್ಲಾ ಗೋಂಢ ನೌಕರರ ಸಂಘದ ಪ್ರತಿನಿಧಿಗಳು ಭಾಗವಹಿಸಿದ್ದರು. ದೆಹಲಿ ಶಾಸಕರಾದ ಶ್ರೀ ದಿನೇಶ ಮೊಹನಿಯಾ, ಪದ್ಮಭೂಷಣ ಶ್ರೀ ಶ್ಯಾಮ್‌ಸಿಂಗ್ ಶಶಿ, ನಿವೃತ್ತ ಮಹಾನಿರ್ದೇಶಕರು, ಮಾಹಿತಿ ಮತ್ತು ಪ್ರಸಾರ ಇಲಾಖೆ, ಭಾರತ ಸರ್ಕಾರ, ಶ್ರೀಮತಿ ಪಾರ್ವತಮ್ಮ ರಾಜ್‌ಗೋಪಾಲ್, ಮಾಜಿ ಮಹಾಪೌರರು, ಬೆಂಗಳೂರು, ಶ್ರೀ ಎಂ.ಟಿ. ಶಿವಕುಮಾರ್, ವಿಶೇಷ ವರದಿಗಾರರು, ದಿ. ಹಿಂದು ದಿನಪತ್ರಿಕೆ, ಬೆಂಗಳೂರು, ಪ್ರೊ. ಶ್ರೀನಿವಾಸ, ತುಮಕೂರು, ಶ್ರೀ ಡಾ. ಶ್ರೀನಿವಾಸ, ಡಾ. ಅಂಜಯ್ಯ ಅವರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಗೌರವ ಅಧ್ಯಕ್ಷರಾದ ಡಾ. ಮುನಿರಾಜು, ಅಧ್ಯಕ್ಷರಾದ ಮಹಾದೇವ, ಕಾರ್ಯದರ್ಶಿಗಳಾದ ಶ್ರೀ ಎಸ್.ಡಿ. ಶ್ರೀನಿವಾಸ ಇತರ ಎಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು.

ವಿಚಾರ ಸಂಕಿರಣದ ಮಧ್ಯೆ ಮತ್ತು ನಂತರ ವಿದ್ವಾನ್ ಕೋಲಾರ ರಮೇಶ್ ಮತ್ತು ತಂಡದವರಿಂದ ಕನಕದಾಸರ ಕೀರ್ತನೆಗಳ ನೃತ್ಯರೂಪಕ ಅದ್ಭುತವಾಗಿ ಮೂಡಿ ಬಂದಿತು. ದೆಹಲಿಯ ಸ್ಥಳೀಯ ಕಲಾವಿದರಾದ ರಚನಾ ಜಗದೀಶ್, ಸಪ್ನಾ ಅತ್ತಾವರ, ಹಿತಶ್ರೀ ರಾಘವೇಂದ್ರ, ಮೋನ, ಸೌಮ್ಯ ರಾಜ್‌ಕುಮಾರ್, ಶ್ರುತಿ ಪ್ರಭಾಕರ್, ಮಮತಾ ಶಿವರಾಮ್, ನೇತ್ರ ಕುಮಾರ್, ಅವನಿ ನೆಲ್ಲಿ ಮುಂತಾದವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಮೂಡಿಬಂದವು. ಈ ಒಂದು ದಿನದ ಕನಕ ಜಯಂತೋತವದಲ್ಲಿ ದೇಶದ ವಿವಿಧ ರಾಜ್ಯಗಳಿಂದ ಪ್ರತಿನಿಧಿಗಳು, ಸಮುದಾಯದ ಮುಖಂಡರು ಭಾಗವಹಿಸಿದ್ದರು. ಕಾರ್ಯಕ್ರಮವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪ್ರಾಯೋಜಕತ್ವದಲ್ಲಿ ಹಾಗೂ ಶೆಫರ್ಡ್ ಇಂಡಿಯಾ ಇಂಟರ್‌ನ್ಯಾಶನಲ್, ನವದೆಹಲಿಯ ಸಹಕಾರದೊಂದಿಗೆ ನಡೆಯಿತು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಮತ್ತು ಡಾ. ಶ್ರೀಧರ್ ರೆಡ್ಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದರಲ್ಲಿ ಸಹಕರಿಸಿದರು. ಅಧ್ಯಕ್ಷರಾದ ಶ್ರೀ ಮಹಾದೇವ ಆರ್. ಅವರು ಧನ್ಯವಾದ ಅರ್ಪಿಸಿದರು. ಕಾರ್ಯಕ್ರಮವನ್ನು ಶ್ರೀಮತಿ ರಶ್ಮಿ ಮುನಿರಾಜು ಮತ್ತು ಶ್ರೀಮತಿ ಆಶಾಲತಾ ಮಹಾದೇವ ಅವರು ನಿರ್ವಹಿಸಿದರು. ಅ

*ಮಹಾದೇವ*





ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದಲ್ಲಿ ಕನ್ನಡ ಕಲಿಯುತ್ತಿರುವ ವಿದ್ಯಾರ್ಥಿಗಳು. ಕುವೆಂಪು, ಯು.ಆರ್. ಅನಂತಮೂರ್ತಿ, ಲಂಕೇಶ್, ದೇವನೂರು, ಯಕ್ಷಗಾನ....ಹೀಗೆ ಇವರ ಆಸಕ್ತಿಗಳು ಹಲವು ಇದೀಗ ಒಟ್ಟು 29 ವಿದ್ಯಾರ್ಥಿಗಳಿದ್ದು ಅವರೆಲ್ಲ ಬೇರೆ ಕೇಂದ್ರಕ್ಕೆ ಸೇರಿದವರಾಗಿದ್ದು ಕರ್ನಾಟಕದ ಮೇಲೆ ಕೆಲಸ ಮಾಡುವ ಉದ್ದೇಶವನ್ನು ಹೊಂದಿದ್ದಾರೆ. ಒಬ್ಬಳು ವಿದ್ಯಾರ್ಥಿನಿ ತುಳು ಕಲಿಯುತ್ತಿದ್ದಾಳೆ. **(ಚಿತ್ರ: ದಿನೇಶ್ ಶೆಣೈ)**

## ಗುರುಗ್ರಾಮ ಕನ್ನಡ ಸಂಘದಲ್ಲಿ ಕನ್ನಡ ಕಲಿಕಾ ಕೇಂದ್ರ ಉದ್ಘಾಟನೆ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಂದಿಗೆ ಗುರುಗ್ರಾಮ ಕನ್ನಡ ಸಂಘದಿಂದ ಇದೇ ಫೆಬ್ರವರಿ 18ರಂದು ಕನ್ನಡಿಗರಿಗೆ ಹಾಗೂ ಕನ್ನಡೇತರರಿಗೆ ಕನ್ನಡ ಕಲಿಸುವ 'ಕನ್ನಡ ಕಲಿಕಾ ಕೇಂದ್ರ' ಪ್ರಾರಂಭಿಸಲಾಯಿತು.

ಗುರುಗ್ರಾಮ ಕನ್ನಡ ಸಂಘ ಕಳೆದ ಎರಡು ದಶಕಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಹಾಗೂ ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ಆಯೋಜಿಸುತ್ತಾ ಬಂದಿದೆ. ನಮ್ಮ ಮಕ್ಕಳಿಗೆ ಕನ್ನಡವನ್ನು ಕಲಿಯಲು ಒಂದು ಸುವರ್ಣಾವಕಾಶವನ್ನು ಮಾಡಿಕೊಟ್ಟ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಗೆ ಕೃತಜ್ಞತೆಗಳು ಎಂದು ಗುರುಗ್ರಾಮ ಕನ್ನಡ ಸಂಘದ ಉಪಾಧ್ಯಕ್ಷರಾದ ಪ್ರಭಾಕರ ಎಂ ಅವರು ಹೇಳಿದರು. ಅವರ ಜತೆಗೆ ಕಾರ್ಯದರ್ಶಿ ಕುಮಾರ್ ಸಿ, ಖಜಾಂಚಿ ಎಂ.ಮರಿಬಸಪ್ಪ, ಕನ್ನಡ ಕಲಿಕಾ ಕೇಂದ್ರಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕನ್ನಡ ಸಂಘದ ಮಾಜೀ ಕಾರ್ಯದರ್ಶಿಗಳಾದ ಎಂ. ಕೃಷ್ಣಪ್ಪ, ಸಾಬುದರ್ಗಾ, ದಯಾನಂದ, ಸಮಿತಿಯ ಸದಸ್ಯರುಗಳಾದ ಶಾಂತ ಕುಮಾರ್ ನಿಂಬಾಳ್, ಸಂತೋಷ್, ಗೋಪಾಲ್, ಲಕ್ಷ್ಮಣ್, ರಾಜ್‌ಕುಮಾರ್ ಹಾಗೂ ಪೋಷಕರು ಉಪಸ್ಥಿತರಿದ್ದರು. ಅ



***ಅಭಿಮತ ವರದಿ***

## ದೆಹಲಿ ತುಳುಸಿರಿಯಿಂದ 'ಸಂಕ್ರಾಂತಿ ಮಿಲನ' ಕಾರ್ಯಕ್ರಮ





ದೆಹಲಿ ತುಳುಸಿರಿಯ ವತಿಯಿಂದ ಇತ್ತೀಚೆಗೆ ಜರುಗಿದ 'ಸಂಕ್ರಾಂತಿ ಮಿಲನ' ವಿಶಿಷ್ಟ ಕಾರ್ಯಕ್ರಮದಲ್ಲಿ ಪರಶುರಾಮ ಸೃಷ್ಟಿಯೆನಿಸಿರುವ ತುಳುನಾಡಿನ ಸಂಸ್ಕೃತಿಯು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಅನಾವರಣಗೊಂಡಿತು. ಸಿಂಡಿಕೇಟ್ ಬ್ಯಾಂಕ್‌ನ ಮಾಜಿ ಡಿಜಿಎಂ ಬಿ. ವಸಂತ ಬಲ್ಲಾಳ್ ಅವರು ದೀಪವನ್ನು ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೆಹಲಿ ತುಳುಸಿರಿಯ ಅಧ್ಯಕ್ಷರಾದ ಕೆ.ಆರ್. ರಾಮಮೂರ್ತಿ ಅವರು ವಹಿಸಿ ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಬದುಕುತ್ತಿರುವ ನಾವೆಲ್ಲರೂ ಈ ದೇಶಕ್ಕೆ ಮಾದರಿಯಾಗಿರುವ ತುಳುನಾಡಿನ ಕಲೆ, ಸಂಸ್ಕೃತಿ, ಆಚಾರ–ವಿಚಾರಗಳನ್ನು ಉಳಿಸಿಕೊಳ್ಳುವುದರ ಜೊತೆಗೆ ನಮ್ಮ ಮುಂದಿನ ಪೀಳಿಗೆಗೆ ಈ ಶ್ರೀಮಂತ ಸಂಸ್ಕೃತಿಯನ್ನು ಕೊಂಡೊಯ್ಯುವ ಮಹತ್ತರವಾದ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

ಆರಂಭದಲ್ಲಿ ಸಾಂಪ್ರದಾಯಿಕ ಚೆಂಡೆ ನಾದ ನಿನಾದವು ನೆರೆದವರ ಮನಸೂರೆಗೊಂಡಿತು. ತುಳುನಾಡಿನ ಜನಪ್ರಿಯ ಕ್ರೀಡೆಗಳಾದ ತೆಂಗಿನ ಕಾಯಿ ಕುಟ್ಟುವುದು, ಟೊಂಕ, ಖೊಖೊ, ಕುಟ್ಟಿದೊಣ್ಣೆ, ಹಗ್ಗಜಗ್ಗಾಟವನ್ನು ದೈಹಿಕ ಶಿಕ್ಷಣ ಶಿಕ್ಷಕರಾದ ಶಿವರಾಮ ಮಣಿಯಾಣಿ ಅವರು ನಡೆಸಿಕೊಟ್ಟರು. ದೆಹಲಿ ತುಳುಸಿರಿಯ ಸ್ಥಾಪಕಾಧ್ಯಕ್ಷರಾದ ಡಾ. ವೈ. ಅವನೀಂದ್ರನಾಥ ರಾವ್ ಅವರು ತುಳುನಾಡಿನ ಕುರಿತಾದ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ತುಳುನಾಡಿನ ಶೈಲಿಯ ರುಚಿಕರವಾದ ವಿಶೇಷ ಭೋಜನ ವ್ಯವಸ್ಥೆಯ ಆಯೋಜನೆಯನ್ನು ಮಾಡಲಾಗಿತ್ತು.

ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಎಸ್. ಕೃಷ್ಣ ಭಟ್, ಅಭಿಮತ ಸಂಪಾದಕರಾದ ಬಾಲಕೃಷ್ಣ ನಾಯ್ಕ್, ದೆಹಲಿ ತುಳುಸಿರಿಯ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ದೆಹಲಿಯ ನೂರಕ್ಕಿಂತ ಹೆಚ್ಚು ಜನ ತುಳುವರು ಪಾಲ್ಗೊಂಡಿದ್ದರು. ಪೂಜಾ ರಾವ್ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಕಾರ್ಯಕ್ರಮವನ್ನು ದೆಹಲಿ ತುಳುಸಿರಿಯ ಕಾರ್ಯದರ್ಶಿ ಪ್ರದೀಪ್ ಕುಮಾರ್ ಕೆ. ಅವರು ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ನಿರೂಪಿಸಿದರು. ಅ

***ಅರವಿಂದ ಬಿಜೈ***

# ಶ್ರೀ ವಿಳಂಬಿಗೆ ಸ್ವಾಗತ

ಉದಿತದಿನ ಮುದಿತವನ: ವಿಧ ವಿಧವಿ ಹಸಹ್ವನಾ!
ಇದುವೆ ಜೀವ ಇದು ಜೀವನ ಪವನದಂತೆ ಪಾವೆನೂ
ಹುಸಿ ನಗುತ ಬಂದೇವ: ನಸು ನಗುತ ಬಾಳೋಣ!
ತುಸು ನಗುತ ತೆರಳೋಣ – ***ದ.ರಾ. ಬೇಂದ್ರೆ!***

**ಶ್ರೀ** ಭುವನೇಶ್ವರಿಯ ಹರವು ಹಸಿರಾಗಿರಲಿ
**ವಿ** ನಾಯಕನನ್ನು ಪ್ರಾರ್ಥಿಸಿ ಸರ್ವ ಜೀವಿಗಳಿಗೆ ಮಂಗ
**ಳಂ** ಕುರು ದೇವೇಶ ಎಂದು ನಮಸ್ಕರಿಸೋಣ.
**ಬಿ** ನ್ನಹವಿದು ಶ್ರೀ ಗಣೇಶ ಎಂದು ಶಿರಬಾಗೋಣ
**ನಾ** ವೀನ್ಯತೆ ನಮ್ಮ ಕಾರ್ಯದಲ್ಲಿರಲಿ;
**ಮ** ನೋಹರದಿಂದ ಶೋಭಿಸುವ ಪರಿಸರ ನಮಗಿರಲಿ
**ಸಂ** ತೃಪ್ತಿ, ಶಾಂತಿ, ಸಂತೋಷ, ಸಹನೆ ಸಮಾಧಾನಗಳ
**ವ** ರ್ಷಧಾರೆ ವರದಾಯೆರ್ದವಾಗಿರಲಿ; ನವವರ್ಷೋ
**ತ್ಸ** ವದ ಪೆಂಪು ಕಂಪು ಇಂಪು ಪಸರಿಸಲಿ
**ರ** ಕ್ಷ ರಕ್ಷೋ ಜಗತ್ಪತೆ ಎಂಬ ಬೇಡಿಕೆಯಿಂದ
**ದ** ಕ್ಷತೆಯಿಂದ ಒಮ್ಮ ಸಮ್ಮತದಿಂದ
**ಶು** ದ್ಧ ಮನಸ್ಸಿನಿಂದ ಯುವ ಪೀಳಿಗೆಯೊಂದಿಗೆ
**ಭಾ** ವೈಕ್ಯರಾಗಿ ಸ್ವಚ್ಛ ಪರಿಸರಕ್ಕಾಗಿ
**ಶ** ಕ್ತಿ ಯುಕ್ತಿಗಳಿಂದ ಕಂಕಣಬದ್ಧರಾಗಿ
**ಯ** ಥೋಚಿತವಾಗಿ ಗುರುತರವಾಗಿ ದುಡಿಯೋಣ
**ಗ** ತಿ ವಿಧಿಗಳಿಂದ ದಶ ದಿಶೆಗಳಲ್ಲಿ ತರು–ಲತೆಗ
**ಳು** ಪುಷ್ಪ–ಫಲಗಳಿಂದ ವಿಕಸಿಸ ಖಗ–ಮೃಗ
ಮಾನವ ಫಲಗಳಿಗೆ ಆಶ್ರಯ ನೀಡಲೆಂದು
ಸಹಕರಿಸಿ ಶ್ರೀ ವಿಳಂಬಿಯನ್ನು ಸ್ವಾಗತಿಸೋಣ.



***ಡಾ. ಅಹಲ್ಯಾಚಿಂತಾಮಣಿ***

# ಶ್ರದ್ಧಾಂಜಲಿ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿದ್ದ ಶ್ರೀ ಎಂ. ಶಿವರಾಜು ಅವರು ಇದೇ ಫೆಬ್ರವರಿ 14ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಭಾರತ ಸರ್ಕಾರದ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಯ ನ್ಯಾಷನಲ್ ಇನ್ಫೊರ್ಮೆಟಿಕ್ ಸೆಂಟರ್‌ನಲ್ಲಿ ಸೈಂಟಿಸ್ಟ್ "ಡಿ" ಅಧಿಕಾರಿಯಾಗಿದ್ದ ಶಿವರಾಜು ಅವರು ಕಳೆದ ಸುಮಾರು ಹದಿನೈದು ವರ್ಷಗಳಿಂದ ದೆಹಲಿಯ ಮಿಂಟೊ ರೋಡ್ ಪ್ರದೇಶದಲ್ಲಿ ವಾಸವಾಗಿದ್ದರು. ಸರಳ ವ್ಯಕ್ತಿತ್ವಕ್ಕೆ ಹೆಸರಾಗಿದ್ದ ಶಿವರಾಜು ಅವರು ಡಾಟಾಬೇಸ್‌ನಲ್ಲಿ ವಿಶೇಷಜ್ಞರೆಂದೇ ಖ್ಯಾತಿ ಪಡೆದಿದ್ದರು. ಅಂತೆಯೇ ಬಹುಮುಖ ಪ್ರತಿಭೆಯ ಶಿವರಾಜು ಅವರು ಸಾಹಸಿ ಚಟುವಟಿಕೆಗಳಲ್ಲಿ, ಮುಖ್ಯವಾಗಿ ಪ್ಯಾರಾ ಗ್ಲೈಡಿಂಗ್ ಮತ್ತು ಪರ್ವತಾರೋಹಣಗಳ ಜೊತೆಗೆ ಟ್ರೆಕ್ಕಿಂಗ್, ಸೈಕ್ಲಿಂಗ್ ಮತ್ತಿತರ ಕ್ರೀಡೆಗಳಲ್ಲಿ ಕೂಡ ಸಕ್ರಿಯವಾಗಿ ಭಾಗವಹಿಸಿದ್ದರು. ಬೈಕಿಂಗ್‌ನಲ್ಲೂ ಆಸಕ್ತರಾಗಿದ್ದ ಅವರು ಲೆಹ್ ಲಡಾಖ್ ವರೆಗೂ ಬೈಕ್ ಸವಾರಿ ಮಾಡಿದ್ದರು. ಇದರ ಜೊತೆಗೆ ಅನೇಕ ಸಾಹಸಿ ಕ್ಲಬ್‌ಗಳ ಸದಸ್ಯತ್ವವನ್ನು ಪಡೆದಿದ್ದರು. ಶಿವರಾಜು ಅವರು ದೆಹಲಿಯ ಬಸವ ಇಂಟರ್‌ನ್ಯಾಷನಲ್ ಸೆಂಟರ್‌ನ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಗುರುತಿಸಿಕೊಂಡಿದ್ದರು.

ಅವರು ಧರ್ಮ ಪತ್ನಿ ಶ್ರೀಮತಿ ಶಶಿಕಲಾ ಮತ್ತು ಓರ್ವ ಮಗನನ್ನು ಅಗಲಿದ್ದಾರೆ. ಅ

***ಜಗದೀಶ್ ಬಂಗೇರಾ***

# ವಾರ್ಷಿಕೋತ್ಸವ

**ದೆಹಲಿ ಕರ್ನಾಟಕ ಸಂಘದ-ವಾರ್ಷಿಕೋತ್ಸವ ಮತ್ತು ಆಟೋಟ ಸ್ಪರ್ಧೆಗಳ ಬಹುಮಾನ ವಿತರಣಾ ಕಾರ್ಯಕ್ರಮವನ್ನು 8 ಏಪ್ರಿಲ್ 2018ರಂದು ಹಮ್ಮಿಕೊಳ್ಳಲಾಗಿದೆ.**

**ಇದೇ ಸಂದರ್ಭದಲ್ಲಿ 'ನೃತ್ಯ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.**

**ಭಾಗವಹಿಸಲಿಚ್ಛಿಸುವ ತಂಡಗಳು**

- **ಸಂಘದ ಸದಸ್ಯರು ಹಾಗೂ ಅವರ ಮಕ್ಕಳಿಗೆ ಮಾತ್ರ ಅವಕಾಶ**
- **ಒಂದು ತಂಡದಲ್ಲಿ ಆರು ಅಥವಾ ಆರಕ್ಕಿಂತ ಹೆಚ್ಚು ಸದಸ್ಯರು ಇರಬೇಕು.**
- **ಯಾವುದೇ ಕನ್ನಡ ಸಿನಿಮಾ ಅಥವಾ ಜಾನಪದ ಸಾಹಿತ್ಯಕ್ಕೆ ನೃತ್ಯವನ್ನು ಮಾಡಬಹುದು. ನೃತ್ಯ ಅರ್ಥಪೂರ್ಣ ವಾಗಿರಬೇಕು.**
- **ಭಾಗವಹಿಸುವ ಪ್ರತಿ ತಂಡಕ್ಕೆ ಗೌರವ ಧನವಾಗಿ ರೂ. 6000/- ವನ್ನು ನೀಡಲಾಗುವುದು.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.**
**ಸಂಘದ ಕಛೇರಿ : 26109615 / 26104818**

**ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ : 9811325440**
**ಶ್ರೀಮತಿ ಪೂಜಾ ಪಿ. ರಾವ್ : 9810882498**
**ಸೂಚನೆ : ಅದೇ ದಿನ ಕ್ವಿಜ್ ಮತ್ತು ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಗುವುದು**

**ಸಿ.ಎಂ. ನಾಗರಾಜ**
**ಪ್ರಧಾನ ಕಾರ್ಯದರ್ಶಿ**


**Statement of Ownership and other Particulars about**
**Delhi Karnataka Sangha's ABHIMATA**
**FORM-IV (See Rule 8)**

| | | |
|---|---|---|
| **Place of Publication** | : | Delhi Karnataka Sangha, New Delhi |
| **Periodicity of Pub** | : | Monthly |
| **Printers Name** | : | M/s Saujanya Printing Press, C-95, Okhla Industrial Area, Phase-I, New Delhi-110020 |
| **Publishers Name** | : | C.M. Nagaraja |
| **Nationality** | : | Indian |
| **Address** | : | Delhi Karnataka Sangha Rao Tularam Marg, Sector-12, R.K. Puram, New Delhi - 110022 |
| **Editor's Name** | : | Balakrishna Naik D |
| **Nationality** | : | Indian |
| **Address** | : | As Above |
| **Name & Address** of Individual who own the News Paper | : | Delhi Karnataka Sangha Rao Tularam Marg, Sector-12 R.K. Puram, New Delhi- 110022 |

I, **C.M. Nagaraja,** hereby declare that the particulars given above are true to the best of my knowledge and belief.

**09.03.2018** **Sd\-**
**New Delhi** **Publisher**

## ಅಭಿನಂದನೆ




### ಯಶಿಬಾ ಸನಿಲ್ ಅವರಿಗೆ ಅಸ್ತಿತ್ವ ಸನ್ಮಾನ್-2018

ಸಮಾಜದ ಏಳಿಗೆಗಾಗಿ ವಿದ್ಯಾರ್ಥಿಗಳ ಪರಿಶ್ರಮವನ್ನು ಗುರುತಿಸಿ ಪ್ರೋತ್ಸಾಹಿಸಿ ಅಭಿನಂದಿಸುತ್ತಿರುವ ಪ್ರೊಗ್ರೆಸ್ ಹಾರ್ಮೋನಿ ಡೆವಲಪ್‌ಮೆಂಟ್ ಚೇಂಬರ್, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಮಿತಿ ನೀಡುವ 2ನೇ ಜೂನಿಯರ್ ಅಸ್ತಿತ್ವ ಸನ್ಮಾನ–2018ರ ಪ್ರಶಸ್ತಿಗೆ ಯಾಶಿಬಾ ಸನಿಲ್ ಪುರಸ್ಕೃತರಾಗಿದ್ದಾರೆ. ಯಶಿಬಾ ಸನಿಲ್ ಅವರು ವಿವಿಧ ಚಟುವಟಿಕೆಗಳಲ್ಲಿ ಸ್ವಯಂಸೇವಕರಾಗಿ ಕಾರ್ಯ ನಿರ್ವಹಿಸಿ ಧನ ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಈಕೆ ಏರ್ ಫೋರ್ಸ್ ಬಾಲ ಭಾರತಿ ಸ್ಕೂಲ್, ನವದೆಹಲಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀಮತಿ ಶರ್ಮಿಳಾ ಸನಿಲ್ ಹಾಗೂ ಬಾಲಕೃಷ್ಣ ಸನಿಲ್ ಅವರ ಪುತ್ರಿ ಅ

*ಅಭಿಮತ ವರದಿ*

## ಓದುಗರ ಅನಿಸಿಕೆ




ಅಭಿಮತದ ಫೆಬ್ರವರಿಯ ಸಂಚಿಕೆಯು ನನ್ನ ಕೈಸೇರಿದೆ ನೋಡಿ–ಓದಿ ಸಂತೋಷವಾಯಿತು. ನಿಮ್ಮ ಹುಟ್ಟೂರಿನಲ್ಲಿ ನಿಮಗೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿಸಿ ಆಯ್ಕೆ ಮಾಡಿ ನಿಮ್ಮನ್ನು ಸತ್ಕರಿಸಿದ್ದು–ಗೌರವಿಸಿದ್ದು ತುಂಬಾ ಅಭಿಮಾನದ ಹೆಗ್ಗಳಿಕೆಯ ವಿಷಯವೇ ಆಗಿದೆ. ನಿಮ್ಮನ್ನು ಕಳೆದ 3–4 ದಶಕಗಳಿಂದ ನಾನು ಬಲ್ಲೆ. ನನಗೆ ಈ ಸಂಚಿಕೆಯು ತಂದಿರುವ ಸಂಭ್ರಮದ ಸುದ್ದಿಯು ಅತೀವ ಆನಂದವನ್ನು ಉಂಟುಮಾಡಿದೆ. ನಿಮ್ಮ ಅಧ್ಯಕ್ಷೀಯ ಭಾಷಣದಲ್ಲಿ ನನ್ನನ್ನು ಸ್ಮರಿಸಿರುವುದು ನನಗೆ ವಿಶೇಷ ಆನಂದವನ್ನು ಉಂಟು ಮಾಡಿದೆ.

ದಿಲ್ಲಿಯ ಕರ್ನಾಟಕ ಸಂಘದಲ್ಲಿ ನೀವು ಸಲ್ಲಿಸಿದ–ಸಲ್ಲಿಸುತ್ತಿರುವ ಸೇವೆ ನಿಜಕ್ಕೂ ಕನ್ನಡ ನಾಡಿನ ಒಂದು ಇತಿಹಾಸವೇ ಆಗಿದೆ. ಅಲ್ಲಿಯ ಸ್ಟೇಷನ್ನಿಗೆ ಸರ್.ಎಂ. ವಿಶ್ವೇಶ್ವರಯ್ಯ ಹೆಸರನ್ನಿಟ್ಟಿದ್ದೀರಿ. ಜೆ.ಎನ್.ಯು. ಹಾಗೂ ದಿಲ್ಲಿಯ ವಿಶ್ವವಿದ್ಯಾಲಯದಲ್ಲಿ ಕನ್ನಡ ಪೀಠವು ಸ್ಥಾಪಿಸಿದ್ದೀರಿ. ಈ ಬಗ್ಗೆ ನಾನು ಈ ಮೊದಲೇ ನಿಮ್ಮನ್ನು ಹಾರ್ದಿಕವಾಗಿ ಅಭಿನಂದಿಸಿದ್ದೆ. ಎಲ್ಲ ಬಗೆಯಲ್ಲಿಯೂ ನೀವು ಕನ್ನಡನಾಡಿನ ಸುಪುತ್ರರೇ–ಒಂದು ರತ್ನವೇ ಆಗಿದ್ದೀರಿ. ಇದೇ ರೀತಿ ನಿಮ್ಮ ಸೇವೆ ನಮ್ಮ ನಾಡು ನುಡಿಗೆ ಸಲ್ಲುತ್ತಿರಲಿ ಎಂದು ಹಾರ್ದಿಕವಾಗಿ ಆಶಿಸುತ್ತಿದ್ದೇನೆ. ಕರ್ನಾಟಕ ಸಂಘದ ಜೊತೆಯಲ್ಲಿ ನೀವು ಇನ್ನೂ ಎತ್ತರಕ್ಕೆ ಏರಿ ನಮಗೆಲ್ಲ ಹೆಸರನ್ನು ತರುವಂತಾಗಲಿಯೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಿದ್ದೇನೆ. ದೆಹಲಿಯ ನನ್ನ ಎಲ್ಲ ಗೆಳೆಯರಿಗೂ ಹಾಗೂ ನಿಮ್ಮ ಎಲ್ಲ ಪದಾದಿಕಾರಿಗಳಿಗೂ ಸವಿನೆನಪುಗಳು–ಸದಾಶಯಗಳು. ಅ

*ರಂಜನ ಭಟ್ಟ,*
*ಧಾರವಾಡ*

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
March-2018, Vol. No.28, Issue No.6, Price Rs.1/-
RNI Regn. No. 53405/91, DL-SW-1/4016/16-18
Date of Publication : March 8th / 9th, Posting Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022,
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

**ಸೌರಭ ತಂಡ, ಕುಕ್ಕೆಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ**















